ANANTHKUMAR PRATISHTHANA

# ಅನಂತಪಥ

ಪುಟ 9
ಬಾಬಾ ಆಮ್ಟೆ
ವ್ಯಕ್ತಿ ವಿಶೇಷ ಮಾಲಿಕೆ



ಸಂಪುಟ - 3 ಮಾರ್ಚ್ - 2023 ಸಂಚಿಕೆ - 33



## ‘ಸಾಮಾನ್ಯ ಹಿನ್ನೆಲೆಯ ಅಸಾಮಾನ್ಯ ಸಾಧಕ’ ಅನಂತಕುಮಾರ್

### ಶ್ರೀ ವಿಜಯ ಸಂಕೇಶ್ವರರ ಮನದಾಳದ ಮಾತುಗಳು

ನಾನು ಬಾಲ್ಯದಿಂದಲೂ ಅನಂತಕುಮಾರರನ್ನೂ ಅವರ ಕುಟುಂಬಸ್ಥರನ್ನೂ ಬಹಳ ಹತ್ತಿರದಿಂದ ನೋಡಿದ್ದೇನೆ. ವರನಟ ರಾಜಕುಮಾರ್ ಸಿನಿಮಾ ರಂಗದಲ್ಲಿ ಹೇಗೆ ಯಾವ ಪಾತ್ರವನ್ನಾದರೂ ಲೀಲಾಜಾಲವಾಗಿ ನಿರ್ವಹಿಸುತ್ತಿದ್ದರೋ ಅದೇ ರೀತಿ ಕೌಟುಂಬಿಕ, ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಅನಂತಕುಮಾರ್ ಎಲ್ಲ ಪಾತ್ರಗಳನ್ನೂ ಸಮರ್ಥವಾಗಿ ನಿರ್ವಹಿಸುತ್ತಿದ್ದರು. ತಂದೆತಾಯಿಯರಿಗೆ ಮಗನಾಗಿ, ನಂದಕುಮಾರರಿಗೆ ಸಹೋದರನಾಗಿ, ವಾಜಪೇಯಿಯವರ ಶಿಷ್ಯನಾಗಿ, ಇದೇ ರೀತಿಯಲ್ಲಿ ಬಹಳ ಹೊಂದಾಣಿಕೆಯಿಂದ, ಆತ್ಮೀಯತೆಯಿಂದ ವರ್ತಿಸುತ್ತಿದ್ದರು. ಯಡಿಯೂರಪ್ಪ - ಅನಂತಕುಮಾರ್ ಜೋಡಿಯನ್ನು ನಾವು ರಾಜಕುಮಾರ್ - ಭಾರತಿ ಜೋಡಿ ಎಂದು ಕರೆಯುತ್ತಿದ್ದೆವು. ಅನಂತಕುಮಾರ್ ಅವರ ತಂದೆ ತಾಯಿಯರು ಆದರ್ಶ ದಂಪತಿಗಳು, ಸಾಮಾನ್ಯ ರೈಲ್ವೆ ನೌಕರರಾಗಿ ಹುಬ್ಬಳ್ಳಿಯ ಸಣ್ಣ ಮನೆಯಲ್ಲಿ ಜೀವನ ನಡೆಸಿದರು. ಅನಂತಕುಮಾರರ ಬದುಕು ಅಲ್ಲಿಂದಲೇ ಪ್ರಾರಂಭವಾಯಿತು. ಅವರ ತಂದೆ ಅಂತಹ ಸ್ಥಿತಿವಂತರಾಗಿರಲಿಲ್ಲ. ಆದರೆ, ಬರೀ ಮಜ್ಜಿಗೆ ಅನ್ನ ಊಟ ಮಾಡಿಯೂ ಫೈಲ್ವಾನರಾಗಿದ್ದರು, ಕುಸ್ತಿಯಲ್ಲಿ ಅನೇಕ ಪದಕಗಳನ್ನು ಗಳಿಸಿದ್ದರು. ಅವರ ತಾಯಿ ಕೂಡ ಅನೇಕ ಹೋರಾಟಗಳನ್ನು ನಡೆಸಿದವರು. ಹುಬ್ಬಳ್ಳಿ ನಗರಪಾಲಿಕೆಯಲ್ಲಿ ಉಪಮೇಯರ್ ಆಗಿ ಕೂಡ ಚುನಾಯಿತರಾಗಿದ್ದರು. ಗಿರಿಜಾ ಶಾಸ್ತ್ರಿಯವರು ತಮ್ಮ 30ನೆಯ ವಯಸ್ಸಿನಲ್ಲಿಯೇ ಕ್ಯಾನ್ಸರ್ ಕಾಯಿಲೆಯಿಂದ ಬಳಲಿದರು. ಅಂದಿನ ಕಾಲದಲ್ಲಿ ಕ್ಯಾನ್ಸರ್ ಕಾಯಿಲೆಗೆ ತುತ್ತಾದವರು ಬದುಕುಳಿಯುವುದೇ ಕಷ್ಟವಿತ್ತು. ಹಾಗಿದ್ದರೂ ಅವರು ತಮ್ಮ ಆತ್ಮಸ್ಥೈರ್ಯದಿಂದ 35 ವರ್ಷ ಬದುಕಿದರು. ಬದುಕಬೇಕೆಂಬ ಛಲ ಅವರಲ್ಲಿತ್ತು.

ಹುಬ್ಬಳ್ಳಿಯ ಈದ್ಗಾ ಮೈದಾನದ ಹೋರಾಟದಲ್ಲಿ ಮತ್ತು 1989ರ ಚುನಾವಣೆಯಲ್ಲಿ ಅಶೋಕ ಕಾಟವೆ ಪರವಾಗಿ ಪ್ರಚಾರದಲ್ಲಿ ನಾನು ಮತ್ತು ಅನಂತಕುಮಾರ್ ಜೊತೆಯಾಗಿ ಭಾಗವಹಿಸಿದ್ದೇವೆ. ಮುಂದೆ ತಿರಂಗಾ ಧ್ವಜದ ಹೋರಾಟದಲ್ಲಿ ಅವರ ಜೊತೆ ಹೆಚ್ಚು ಓಡಾಟ ನಡೆಸುವ ಅವಕಾಶ ಸಿಕ್ಕಿತ್ತು. ನಂತರದ ದಿನಗಳಲ್ಲಿ ಯಡಿಯೂರಪ್ಪ ಹಾಗೂ ಅನಂತಕುಮಾರ್ ಕರ್ನಾಟಕದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸುವುದರಲ್ಲಿ ನಿರತರಾದರು. ಪುಟ 6 ರಲ್ಲಿ ಮುಂದುವರೆದಿದೆ

## ಅನಂತ ವಿಶ್ವರೂಪ ದರ್ಶನ

**ಶ್ರೀ ಸು.ರಾಮಣ್ಣ**
**ಹಿರಿಯ ಪ್ರಚಾರಕರು, ರಾ. ಸ್ವ. ಸೇ. ಸಂಘ**



ಉತ್ತರ ಕರ್ನಾಟಕದಲ್ಲಿ “ಶರಣರ ಮಹಿಮೆ, ಮರಣದ ನಂತರ” ಎಂಬ ಒಂದು ಮಾತಿದೆ. ನಾವು ನೀವೆಲ್ಲ ಇಷ್ಟೊಂದು ವರ್ಷಗಳ ಕಾಲ ಅನಂತಕುಮಾರ್ ಅವರ ಜೊತೆ ಇದ್ದರೂ, ಅವರ ವ್ಯಕ್ತಿತ್ವ ಎಷ್ಟು ವಿಸ್ತಾರವಾಗಿ, ವ್ಯಾಪಕವಾಗಿ, ಘನವಾಗಿತ್ತು ಅನ್ನುವುದು ಗೊತ್ತೇ ಆಗಿರಲಿಲ್ಲ. ಆದರೆ, ಅವರ ಅಕಾಲ ನಿಧನದ ನಂತರ ಪತ್ರಿಕೆಗಳಲ್ಲಿ ಬಂದ ಅನೇಕ ಮಾಹಿತಿಗಳಿಂದ ಅವರ ಆಳ, ಅಗಲ, ಎತ್ತರ ಎಲ್ಲ ಬೆಳಕಿಗೆ ಬಂದವು. ಹೆಸರಿಗೆ ತಕ್ಕಂತೆ ಅಂತವೇ ಇಲ್ಲದ ಅನಂತ ಜೀವನ ನಡೆಸಿದವರು ಅನಂತಕುಮಾರ್. ಮನಸ್ಸಿಗೆ ನೆಮ್ಮದಿ ಸಿಗಬೇಕಾದರೆ ಕೆಲವು ವಿಷಯಗಳನ್ನು ಸಾಧ್ಯವಾದಷ್ಟು ಬೇಗ ಮರೆತು ಬಿಡಬೇಕು. ಅವೆಲ್ಲ ಮರೆಯಲೇ ಬೇಕಾದ ನೆನಪುಗಳು. ಆದರೆ ಕೆಲವು ಮರೆಯಬಾರದ ನೆನಪುಗಳಿರುತ್ತವೆ. ಈ ಮರೆಯಬಾರದ ನೆನಪುಗಳನ್ನು ನಾವು ಜ್ಞಾಪಿಸಿಕೊಂಡಾಗ ನಮ್ಮ ಜೀವನಕ್ಕೆ ಹೊಸ ಭರವಸೆ ಸಿಗುತ್ತದೆ. ಮರೆವು ಒಂದು ಸಂಜೀವಿನಿ ಇದ್ದ ಹಾಗೆ! ಮೂರನೆಯದು, ಮರೆಯಲಾಗದ ನೆನಪುಗಳು. ಮರೆಯಬೇಕೆಂದುಕೊಂಡರೂ ಸಾಧ್ಯವಾಗದ ಛಾಪನ್ನು ಆ ನೆನಪುಗಳು ಹೊಂದಿರುತ್ತವೆ. ಇಂತಹ ಅನಂತ ನೆನಪುಗಳು ಮನಸ್ಸಿಗೆ ಬಹಳ ಖುಷಿ ಕೊಡುತ್ತವೆ. ಮರೆಯಲಾಗದ, ಮರೆಯಬಾರದ, ಮರೆತು ಹೋದ ನೆನಪುಗಳು ನಮ್ಮ ಜೀವನದ ಯಾತ್ರೆಯಲ್ಲಿ ನೆಮ್ಮದಿ ಉಂಟುಮಾಡುವುದರಲ್ಲಿ ಯಾವುದೇ ಸಂದೇಹವಿಲ್ಲ. ದೊಡ್ಡವರ ಬದುಕನ್ನು ಇಷ್ಟು ಕಾಲಾವಧಿಯ ಜೀವನದ ಯಾತ್ರೆ ಎಂದು ಹೇಳುವುದು ಸಾಧ್ಯವಿಲ್ಲ. ಅವರ ಬದುಕನ್ನು ವಿವರಿಸುವ ಉತ್ತಮವಾದ ಶಬ್ದ ‘ವಾರಸಿಕೆ’. ಕೆಲವರು ತಮ್ಮ ಬದುಕನ್ನು ನಮಗೆ ಕೊಟ್ಟು ಹೋಗುತ್ತಾರೆ, ಕೆಲವರು ಇಟ್ಟು ಹೋಗುತ್ತಾರೆ, ಇನ್ನು ಕೆಲವರು ಬಿಟ್ಟು ಹೋಗುತ್ತಾರೆ. ಬಿಟ್ಟು ಹೋದದ್ದು ಯಾರಿಗೆ ಸಿಗುವುದೋ, ತಿಳಿಯದು. ಆದರೆ, ಕೊಟ್ಟು ಹೋದ ಬದುಕನ್ನು ಜತನದಿಂದ ಕಾಪಾಡುವ ಸಲುವಾಗಿಯೇ ಕೊಟ್ಟು ಹೋಗುತ್ತಿರುವುದು. ಅದನ್ನು ಯಾರು ತೆಗೆದುಕೊಂಡಿರುವವರೋ

ಪುಟ 6 ರಲ್ಲಿ ಮುಂದುವರೆದಿದೆ

## ಹುಬ್ಬಳ್ಳಿಯಲ್ಲಿ ಅನಂತ ಪ್ರೇರಣಾ ಕೇಂದ್ರ

ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ಅನಂತ ಪ್ರೇರಣಾ ಕೇಂದ್ರವನ್ನು ಪ್ರಾರಂಭಿಸಲಾಯಿತು. ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಸು.ರಾಮಣ್ಣ, ಶ್ರೀ ವಿಜಯ ಸಂಕೇಶ್ವರ, ಪ್ರೊ. ಪಿ. ವಿ ಕೃಷ್ಣ ಭಟ್ಟ, ಶ್ರೀ ಹೆಚ್. ಎನ್. ನಂದಕುಮಾರ್ ಅವರೊಡನೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಅನಂತಕುಮಾರರ ಮಕ್ಕಳಾದ ಶ್ರೀಮತಿ ಐಶ್ವರ್ಯಾ ಮತ್ತು ಕುಮಾರಿ ವಿಜೇತಾ ಮೊದಲಾದವರು ಭಾಗವಹಿಸಿದ್ದರು. ವರದಿ - ಪುಟ 5



# ಉಡುಪಿ ಜಿಲ್ಲೆಯ ಹಲವು ದೇವಾಲಯಗಳು - ಭಾಗ 2

ದೇಗುಲದರ್ಶನ ಮಾಲಿಕೆ - 20









ಈ ಸಂಚಿಕೆಯಲ್ಲಿ ಉಡುಪಿ ಹಾಗೂ ಸುತ್ತಲಿನ ಇನ್ನಷ್ಟು ಪುರಾತನ ದೇವಾಲಯಗಳನ್ನು ನೋಡೋಣ. ಉಡುಪಿಯಿಂದ 41 ಕಿಮೀ ದೂರದಲ್ಲಿರುವ ಕಾರ್ಕಳದ ಬಾಹುಬಲಿಯ ವಿಗ್ರಹ ಪ್ರಸಿದ್ಧವಾದುದು. 42 ಅಡಿ ಎತ್ತರದ ಈ ಏಕಶಿಲಾ ವಿಗ್ರಹವನ್ನು 1432ರಲ್ಲಿ ಮುಮ್ಮಡಿ ವೀರಪಾಂಡ್ಯನೆಂಬ ಅರಸನು ನಿರ್ಮಿಸಿದನು. ಬಾಹುಬಲಿಯ ಹಿಂಭಾಗದಲ್ಲಿರಿಸಿರುವ ತೀರ್ಥಂಕರರ ವಿಗ್ರಹಗಳೂ, ಮುಂಭಾಗದ ಸ್ತಂಭದ ಮೇಲಿನ ಬ್ರಹ್ಮಯಕ್ಷನ ಶಿಲ್ಪವೂ ನೋಡತಕ್ಕವು. ಇಲ್ಲೇ ಸಮೀಪವಿರುವ ಚತುರ್ಮುಖ ಬಸದಿಯೂ ಪ್ರೇಕ್ಷಣೀಯವಾಗಿದ್ದು, ವಿಜಯನಗರ ಕಾಲದಲ್ಲಿ ನಿರ್ಮಿತವಾದ ಕಟ್ಟಡವಾಗಿದೆ. ಕಾರ್ಕಳದ ವೆಂಕಟರಮಣ ದೇವಾಲಯಕ್ಕೆ ಅಧಿಕಸಂಖ್ಯೆಯಲ್ಲಿ ಭಕ್ತರು ಭೇಟಿನೀಡುತ್ತಾರೆ. ಇಲ್ಲಿನ ಇನ್ನೊಂದು ಪ್ರಸಿದ್ಧ ಗುಡಿ ಅನಂತಪದ್ಮನಾಭ ದೇವಾಲಯ. ಬೈರರಸರ ಆಳ್ವಿಕೆಯಲ್ಲಿ 16ನೇ ಶತಮಾನದಲ್ಲಿ ಕಟ್ಟಲಾದ ಈ ಗುಡಿಯಲ್ಲಿರುವ ಶೇಷಶಾಯಿ ವಿಷ್ಣುವಿನ ವಿಗ್ರಹ ಆಕರ್ಷಕವಾದುದು. ಕಾರ್ಕಳದಿಂದ 24 ಕಿಮೀ ದೂರದ ವರಂಗ ಒಂದು ಪ್ರಸಿದ್ಧ ಜೈನಕ್ಷೇತ್ರ. ಇಲ್ಲಿನ ನೇಮಿನಾಥ ಬಸದಿ 12 ನೇ ಶತಮಾನದಷ್ಟು ಪುರಾತನವಾದುದು. ಇಲ್ಲಿರುವ ಸರೋವರದ ನಡುವೆ ಕಟ್ಟಲಾದ ಕೆರೆಬಸದಿ ಮನೋಹರವಾದ ಪ್ರೇಕ್ಷಣೀಯ ತಾಣವೂ ಹೌದು. ಅಳುಪರ ರಾಣಿಯಿಂದ 11ನೇ ಶತಮಾನದಲ್ಲಿ ನಿರ್ಮಿತವಾದ ಕೆರೆಯಲ್ಲಿ ದೋಣಿಯ ಮೂಲಕ ತಲುಪಬೇಕಾದ ಈ ಬಸದಿಯಲ್ಲಿ ಪಾರ್ಶ್ವನಾಥ, ಶಾಂತಿನಾಥ ಮೊದಲಾದ ತೀರ್ಥಂಕರರ ಮೂರ್ತಿಗಳಿವೆ. ಉಡುಪಿಯ ಶ್ರೀಕೃಷ್ಣಮಠವು ನಮ್ಮ ನಾಡಿನ ಬಹು ಜನಪ್ರಿಯ ದೇಗುಲಗಳಲ್ಲೊಂದು. ವೈಷ್ಣವ ಸಂಪ್ರದಾಯದ ಹಿರಿಯ ಆಚಾರ್ಯರಲ್ಲೊಬ್ಬರಾದ ಶ್ರೀ ಮಧ್ವಾಚಾರ್ಯರು ಇಲ್ಲಿ ಪ್ರತಿಷ್ಠಾಪಿಸಿದ ಶ್ರೀಕೃಷ್ಣನ ಮೂರ್ತಿಯು ಮನೋಹರವಾಗಿದೆ. ದೇವಾಲಯವು 15ನೇ ಶತಮಾನದ ಕೆಳದಿ ಅರಸರ ಕಾಲದಲ್ಲೂ ಮುಂದೆ ಬಾರಕೂರು ಅರಸರಿಂದಲೂ ಪುನರ್ನಿರ್ಮಾಣಗೊಂಡಿದೆ. ದೇಗುಲದ ಪಕ್ಕದಲ್ಲಿರುವ ಮಧ್ವ ಸರೋವರವು ಮೈಸೂರು ಅರಸರ ಕಾಲದಲ್ಲಿ ಪುನರ್ನಿರ್ಮಿತವಾಗಿದೆ. ಮಧ್ವಪರಂಪರೆಯನ್ನು ಮುಂದುವರಿಸಿರುವ ಅಷ್ಟಮಠಗಳ ಕಟ್ಟಡಗಳೂ ಪೂಜಾಸ್ಥಾನಗಳೂ ಶ್ರೀಕೃಷ್ಣದೇಗುಲದ ಆಸುಪಾಸಿನಲ್ಲಿ ಕಂಡುಬರುತ್ತವೆ.

ಉಡುಪಿಯ ದೇವಾಲಯಗಳಲ್ಲಿ ಪಡುದೇವನೆಂದು ಖ್ಯಾತನಾದ ಶ್ರೀ ಅನಂತೇಶ್ವರ ದೇವಾಲಯವು ಅತಿ ಪ್ರಾಚೀನವಾದದ್ದು. 8ನೇ ಶತಮಾನಕ್ಕೆ ಸೇರಿದ ಈ ಗುಡಿಯ ಕಾರಣದಿಂದಲೇ ಉಡುಪಿಗೆ ಪೂರ್ವದಲ್ಲಿ ಶಿವಳ್ಳಿಯೆಂಬ ಹೆಸರು ಬಂದಿತು. ಈ ಗುಡಿಯ ಪರಿಸರದಲ್ಲೇ ಇದ್ದಿರಬಹುದಾದ ಕೆರೆಯ ತಗ್ಗಿನಲ್ಲಿ ಶ್ರೀ ಚಂದ್ರಮೌಳೇಶ್ವರ ದೇವಾಲಯವಿದೆ. ಮೂಡುದೇವರ ದೇಗುಲವೆಂದು ಹೆಸರು ಪಡೆದ ಈ ಗುಡಿಯು 11 ನೇ ಶತಮಾನಕ್ಕೆ ಸೇರಿದ್ದು, ಇಲ್ಲಿ ಮಧ್ವಾಚಾರ್ಯರು ಶಿಷ್ಯರಿಗೆ ಉಪನಿಷತ್ತನ್ನು ಬೋಧಿಸುತ್ತಿದ್ದರೆಂದು ಪ್ರತೀತಿ. ಉಡುಪಿಗೆ ಹೊಂದಿಕೊಂಡಂತೆ ಎರಡು ಕಿಮೀ ದೂರದಲ್ಲಿರುವ ಅಂಬಲಪಾಡಿಯಲ್ಲಿ ಲಕ್ಷ್ಮೀ ಜನಾರ್ದನ ದೇವಾಲಯವಿದೆ. 16ನೇ ಶತಮಾನದಲ್ಲಿ ಶ್ರೀಧರ ನಿಡಂಬೂರು ಎಂಬ ದಂಡನಾಯಕನಿಂದ ಜೀರ್ಣೋದ್ಧಾರಗೊಂಡಿರುವ ಈ ಗುಡಿಯ ಜನಾರ್ದನ ಮೂರ್ತಿ ಪುರಾತನವಾದುದು. ಇದೇ ಆವರಣದಲ್ಲಿರುವ ಮಹಾಕಾಳಿ ದೇವಾಲಯವು 16ನೇ ಶತಮಾನಕ್ಕೆ ಸೇರಿದ್ದು ಇಲ್ಲಿಗೆ ಬಹುಸಂಖ್ಯೆಯ ಭಕ್ತರು ಭೇಟಿನೀಡುತ್ತಾರೆ.

ಉದ್ಯಾವರವು ಉಡುಪಿಯಿಂದ 4 ಕಿಮೀ ದೂರದಲ್ಲಿದೆ. ಪಾಪನಾಶಿನೀ ನದಿಯ ದಂಡೆಯ ಮೇಲಿರುವ ಈ ಊರು ಪೂರ್ವದಲ್ಲಿ ಅಳುಪರ ರಾಜಧಾನಿಯಾಗಿತ್ತು. ಇಲ್ಲಿನ ಗುಡ್ಡದ ಮೇಲಿರುವ ಶಂಭುಶೈಲೇಶ್ವರ ಮತ್ತು ಪ್ರಸನ್ನ ಸೋಮೇಶ್ವರ ದೇವಾಲಯಗಳು ಹತ್ತನೇ ಶತಮಾನದಷ್ಟು ಪುರಾತನವಾದವು. ಗಜಪೃಷ್ಠಾಕೃತಿಯ ಸೋಮೇಶ್ವರ ದೇವಾಲಯವನ್ನು ಇದೀಗ ಜೀರ್ಣೋದ್ಧಾರಮಾಡಲಾಗುತ್ತಿದೆ.

ಉದ್ಯಾವರದಲ್ಲಿರುವ ಇತರ ದೇವಾಲಯಗಳಲ್ಲಿ ವಿನಾಯಕ, ವೀರಭದ್ರ, ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತೀ ದೇವಾಲಯಗಳು ಪ್ರಮುಖವಾದವು. 15ನೇ ಶತಮಾನದಲ್ಲಿ ಜೀರ್ಣೋದ್ಧಾರಗೊಂಡ ಮಹಾಕಾಳಿ ದೇವಾಲಯದಲ್ಲಿರುವ ಕಾಳೀ, ಲಕ್ಷ್ಮೀ, ಸರಸ್ವತಿಯರ ಮಣ್ಣಿನ ಮೂರ್ತಿಗಳು ಬೆರಗುಮೂಡಿಸುತ್ತವೆ. ವೀರಭದ್ರನ ಕಾಷ್ಠಶಿಲ್ಪವು ದ್ವಾದಶಭುಜಗಳಿಂದ ಕೂಡಿದ್ದು ಆಕರ್ಷಕವಾಗಿದೆ. ಇದೇ ಆವರಣದಲ್ಲಿರುವ ಪಂಜುರ್ಲಿದೈವದ ಗುಡಿಯೂ ವಿಶೇಷವಾದುದು.

ಉಡುಪಿಯಿಂದ ಆರು ಕಿಮೀ ದೂರದ ಮೂಡು ಅಲೆವೂರು ಐತಿಹಾಸಿಕವಾಗಿ ಪ್ರಸಿದ್ಧಿಪಡೆದ ಕೇಂದ್ರಗಳಲ್ಲಿ ಸೇರಿದೆ. ಇಲ್ಲಿನ ಜನಾರ್ದನ ದೇವಾಲಯವು ಕದಂಬರ ಮಯೂರವರ್ಮನ ನಿರ್ಮಿತಿಯೆಂದು ಐತಿಹ್ಯವಿದೆ. ಸಮೀಪದ ಪಡು ಅಲೆವೂರಿನಲ್ಲಿರುವ ದುರ್ಗಾ ದೇವಾಲಯವು ಹತ್ತನೇ ಶತಮಾನಕ್ಕೆ ಸೇರಿದ್ದು, ವಿಜಯನಗರ ಕಾಲದಲ್ಲಿ ಬಾರಕೂರು ಅರಸರಿಂದ ಜೀರ್ಣೋದ್ಧಾರಗೊಂಡಿದೆ. ಉಡುಪಿಗೆ ಸೇರಿಕೊಂಡಂತೆ ಎರಡು ಕಿಮೀ ದೂರದಲ್ಲಿರುವ ಕಟಪಾಡಿಯಲ್ಲಿ ಶ್ರೀ ವೆಂಕಟರಮಣ ದೇವಾಲಯವಿದೆ. ಇಲ್ಲಿನ ಮಂಟಪ, ಆವರಣ, ಭುವನೇಶ್ವರಿ ಮೊದಲಾದವನ್ನು ಕಾಷ್ಠಶಿಲ್ಪಗಳಿಂದ ಅಲಂಕರಿಸಿರುವ ರೀತಿ ಅನನ್ಯವಾಗಿದೆ. 16 ನೇ ಶತಮಾನಕ್ಕೆ ಸೇರಿದ ಈ ಗುಡಿಯನ್ನು 1816ರಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಇಲ್ಲೇ ಪಕ್ಕದಲ್ಲಿರುವ ಮಟ್ಟು ಗ್ರಾಮದಲ್ಲಿರುವ ಜನಾರ್ದನ ದೇವಾಲಯ 13ನೇ ಶತಮಾನಕ್ಕೆ ಸೇರಿದ್ದು ದೇವರ ಮೂರ್ತಿ ಮನಸೆಳೆಯುವಂತಿದೆ. ಪಕ್ಕದಲ್ಲಿರುವ ದುರ್ಗಾ ದೇವಾಲಯವೂ 13 ನೇ ಶತಮಾನದ ನಿರ್ಮಿತಿಯಾಗಿದೆ.

**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ**

LINK- http://YouTube.com/AnanthkumarPratishthana

> **"ದೇಗುಲ ದರ್ಶನ ಮಾಲಿಕೆಯಲ್ಲಿ ನಮ್ಮ ಉಡುಪಿ ಜಿಲ್ಲೆಯನ್ನು ಪರಿಚಯಿಸಿರುವುದಕ್ಕಾಗಿ ನನಗೆ ಸಂತೋಷವೆನಿಸುತ್ತಿದೆ. ಧನ್ಯವಾದಗಳು."**
>
> **- ಶ್ರೀ ಸುನಿಲ್ ಕುಮಾರ್,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು

# ಅನಂತಯಾನ ಅಧ್ಯಾಯ- 9

# ಶಿಶುವಿಹಾರದ ಬಾಲಶಿಕ್ಷಕ

ನಿರೂಪಣೆ : ಟಿ.ಎಸ್. ಗೋಪಾಲ್


ಆರೇಳು ವರುಷದ ಹುಡುಗಿ ಚಿತ್ಕಲಾ ತನ್ನ ತೊಡೆಯ ಮೇಲಿದ್ದ ಹಸುಗೂಸನ್ನು ಅಚ್ಚರಿ ಸಂಭ್ರಮಗಳಿಂದ ದಿಟ್ಟಿಸಿ ನೋಡುತ್ತಿದ್ದಳು. ಅಷ್ಟು ಪುಟ್ಟ ಮಗುವನ್ನು ಅವಳು ಎಂದೂ ಕಂಡೇ ಇರಲಿಲ್ಲ. ಅಂದೇ ಸ್ವಲ್ಪಹೊತ್ತಿಗಷ್ಟೇ ಮೊದಲು ಜನಿಸಿದ್ದ ಮಗು. ತಾಯಿ, ಅಜ್ಜಿಯರ ನಂತರ ಆ ಕೂಸನ್ನು ಎತ್ತಿಕೊಳ್ಳುವ ಅವಕಾಶ ತನಗೇ ಸಿಕ್ಕಿದ್ದು ಹುಡುಗಿಯ ಸಡಗರವನ್ನು ಇಮ್ಮಡಿಗೊಳಿಸಿತ್ತು. ತನಗೆ ಮಗುವನ್ನು ಮುಟ್ಟಲು ಬಿಡದೆ ಅಜ್ಜಿ ಜತನದಿಂದ ಎತ್ತಿಕೊಂಡು ಹೊರಟುಬಿಟ್ಟದ್ದಕ್ಕೆ ಅವಳಿಗೆ ಬೇಸರವೇನೂ ಆಗಲಿಲ್ಲ. ಅದೊಂದು ಕ್ಷಣ ಜೀವಮಾನವಿಡೀ ನೆನಪುಳಿಯುವ ಸವಿಗಳಿಗೆಯೇ ಸರಿ.

ಚಿತ್ಕಲಾ ಎತ್ತಿಕೊಂಡು ಸಂಭ್ರಮಿಸಿದ್ದ ಮಗುವೇ ಅನಂತಕುಮಾರ. ಅವಳ ಪ್ರೀತಿಯ ಸೋದರತ್ತೆ, ತಂದೆಯ ತಂಗಿ ಗಿರಿಜಾರವರ ಚೊಚ್ಚಲ ಮಗು. ಗಿರಿಜಾ ತನ್ನ ಅತ್ತೆಯಾಗಿದ್ದರೂ ಅವರನ್ನು ಚಿತ್ಕಲಾ ಅಕ್ಕ ಎಂದೇ ಕರೆಯುತ್ತಿದ್ದಳು. ಹೋದ ವರುಷ ಅವರು ಮದುವೆಯಾಗಿ ಮೈಸೂರಿಗೆ ಹೊರಟುಹೋದಾಗ ಅವಳಿಗೆ ಆದ ಬೇಸರ ಹೇಳತೀರದು. ಮಾರನೇ ವರ್ಷ ಹೆರಿಗೆಗೆಂದು ಗಿರಿಜಾ ಶೇಷಾದ್ರಿಪುರದಲ್ಲಿದ್ದ ತಂದೆಯ ಮನೆಗೆ ಬಂದಾಗ ಚಿತ್ಕಲಾಗೆ ಮರೆತ ಸಂಭ್ರಮ ಮರುಕಳಿಸಿದಂತಾಯಿತು. ಇನ್ನು ಗಿರಿಜಕ್ಕ ಬಾಣಂತನ ಮುಗಿಸಿ ಹೊರಡುವವರೆಗೂ ಅವಳ ನಲಿವನ್ನು ವರ್ಣಿಸುವಂತೆಯೇ ಇಲ್ಲ. ಸದ್ಯಕ್ಕೆ ಗಿರಿಜಕ್ಕ ಮೊದಲಿನಂತೆ ತನ್ನೊಡನೆ ಎದ್ದು ಓಡಾಡದಿದ್ದರೂ ಚಿಂತೆಯಿಲ್ಲ. ತಾನೇ ಗಿರಿಜಕ್ಕ ಇರುವಲ್ಲಿಗೆ ಹೋಗಿ ಪುಟ್ಟಮಗುವಿನ ಚಲನವಲನಗಳನ್ನು ಗಮನಿಸುತ್ತಿರಬಹುದಲ್ಲ!

ಎರಡು ವರ್ಷಗಳ ನಂತರ ಮತ್ತೊಂದು ಹೆರಿಗೆಗಾಗಿ ಗಿರಿಜಕ್ಕ ಬೆಂಗಳೂರಿಗೆ ಬಂದಿದ್ದರು. ಆಗ ಚಿತ್ಕಲಾ ಕಂಡ ಅನಂತಕುಮಾರ ಒಂದೂವರೆ ವರುಷದ ಮಗು. ಆ ಅವಧಿಯಲ್ಲಿ ಸುವಾಸಿನಿ (೧೯೬೧ ಜೂನ್) ಹುಟ್ಟಿದಳು.

೧೯೬೨ರಲ್ಲಿ ಮೂರನೆಯ ಮಗುವಿನ ಹೆರಿಗೆಯ ಹೊತ್ತಿಗೆ ಗಿರಿಜಾ ತಮ್ಮ ಇಬ್ಬರು ಮಕ್ಕಳೊಡನೆ ಮೈಸೂರಿನಲ್ಲಿ ಮಾವನ ಮನೆಗೆ ಬಂದು ಇದ್ದರು. ಅಷ್ಟರ ವೇಳೆಗೆ ಎರಡೂವರೆ ವರ್ಷದ ಮಗು ಅನಂತಕುಮಾರ್ ಮನೆ ತುಂಬಾ ಚೂಟಿಯಾಗಿ ಓಡಾಡುತ್ತಿದ್ದ. ಮಗುವಿನ ಚಟುವಟಿಕೆಗೆ ಮನೆಯಲ್ಲಿ ಅವಕಾಶ ಸಾಲದು, ಹಾಗೆಂದು ಕರೆದುಕೊಂಡು ಹೋಗುವುದೆಲ್ಲಿಗೆ? ಆ ಕಾಲದಲ್ಲಿ ನಾರಾಯಣ ಶಾಸ್ತ್ರಿಗಳ ಸೋದರ ಸಂಬಂಧಿ, ಅಚ್ಚಮ್ಮಕ್ಕನ ಮಗಳು ಲೀಲಾ, ಭಗಿನಿ ಸೇವಾ ಸಮಾಜದ ಶಿಶುವಿಹಾರದಲ್ಲಿ ಕೆಲಸ ಮಾಡುತ್ತ ಇದ್ದರು.




ಅಲ್ಲಿಗೆ ಮಗುವನ್ನು ಕರೆದುಕೊಂಡು ಹೋಗುವಂತೆ ನರಹರಿ ಶಾಸ್ತ್ರಿಗಳು ಲೀಲಾಳಿಗೆ ಹೇಳಿದರು. ಗೌರವಾನ್ವಿತರಾದ ನರಹರಿ ಶಾಸ್ತ್ರಿಗಳ ಮೊಮ್ಮಗ ತಮ್ಮ ಶಾಲೆಗೆ ಬರುತ್ತಾನೆಂದು ಭಗಿನೀ ಸೇವಾ ಸಮಾಜದ ಸಂಸ್ಥಾಪಕಿ ಶ್ರೀಮತಿ ಸುರಮಾಬಾಯಿಯವರೂ ಸಂತೋಷಪಟ್ಟುಕೊಂಡರು.

ಅನಂತಕುಮಾರ ಶಾಲೆಗೆ ಬಂದ ಮೊದಲ ದಿನವೇ ಎಲ್ಲರ ಜೊತೆ ಬೆರೆತು ಸಂಭ್ರಮಿಸಿದ. ತಾನು ಯಾವುದೋ ಅಪರಿಚಿತ ಜಾಗಕ್ಕೆ ಬಂದಿದ್ದೇನೆಂದು ಅವನಿಗೆ ಅನ್ನಿಸಲೇ ಇಲ್ಲ. ಶಿಶುವಿಹಾರದಲ್ಲಿ ಎಲ್ಲಾ ಮಕ್ಕಳು ಮಾಡಿದ ಚಟುವಟಿಕೆಗಳಲ್ಲಿ ತಾನೂ ಉತ್ಸಾಹದಿಂದ ಭಾಗವಹಿಸಿದ. ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುಬ್ಬಲಕ್ಷಮ್ಮನವರು ಎಲ್ಲ ಮಕ್ಕಳನ್ನೂ ವೃತ್ತಾಕಾರದಲ್ಲಿ ನಿಲ್ಲಿಸಿ, ಹಾರ್ಮೋನಿಯಂ ನುಡಿಸುತ್ತ ಹಾಡು ಹೇಳಿಕೊಡುತ್ತಿದ್ದರು. ಕುಮಾರನೂ ಎಲ್ಲ ಮಕ್ಕಳೊಡನೆ ಚಪ್ಪಾಳೆ ತಟ್ಟುತ್ತಾ ಎತ್ತರದ ಧ್ವನಿಯಲ್ಲಿ ಹಾಡತೊಡಗಿದ: "ಆಕಾಶದಲ್ಲಿ ಏರೋಪ್ಲೇನ್ ಹಾರುತಲಿದೆ ಭರ್ ಭರ್ ಎನ್ನುತ್ತಾ..."

ಶಾಲೆಯಿಂದ ಮನೆಗೆ ಬಂದವನೇ ಅನಂತಕುಮಾರ ತನ್ನ ತಾತ ನರಹರಿ ಶಾಸ್ತ್ರಿಗಳ ಮುಂದೆ ಸ್ಕೂಲಿನಲ್ಲಿ ನಡೆದುದೆಲ್ಲವನ್ನೂ ವರದಿಯೊಪ್ಪಿಸಿದ. ಆಕಾಶದಲ್ಲಿ ಏರೋಪ್ಲೇನ್ ಹಾರುತ್ತಲಿದೆ ಎಂದು ಅಭಿನಯಪೂರ್ವಕವಾಗಿ ಹಾಡಿ ತೋರಿಸಿದ. ಒಂದೇ ದಿನಕ್ಕೆ ಮಗು ಎಷ್ಟೊಂದು ಕಲಿತುಕೊಂಡು ಬಿಟ್ಟಿದ್ದಾನೆ ಎಂದು ನರಹರಿ ಶಾಸ್ತ್ರಿಗಳು ಮೆಚ್ಚಿಕೊಂಡರು. ಮಗುವನ್ನು ಅದೇ ಶಾಲೆಗೆ ದಾಖಲುಮಾಡುವಂತೆಯೂ ಹೇಳಿದರು. ಅನಂತಕುಮಾರ ಶಾಲೆಗೆ ಹೋಗಿ ಅಲ್ಲಿನ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ತುಂಬ ಇಷ್ಟಪಡುತ್ತಿದ್ದ. ಮಕ್ಕಳು ಯಾವ ಯಾವ ಅಭ್ಯಾಸಗಳಲ್ಲಿ ತೊಡಗುತ್ತಾರೆಯೋ ಅವನ್ನು ಅನುಕರಿಸುವುದಕ್ಕಿಂತ, ಉಪಾಧ್ಯಾಯಿನಿ ಲೀಲಾ ಏನು ಮಾಡುತ್ತಾರೋ ಅದನ್ನು ಅನುಸರಿಸುವುದರಲ್ಲಿ ಹೆಚ್ಚಿನ ಆಸಕ್ತಿ. ಲೀಲಾ ಶಿಶುವಿಹಾರದಲ್ಲಿದ್ದ ಒಳಾಂಗಣ ಆಟದ ಸಾಮಗ್ರಿಗಳನ್ನು ಮಕ್ಕಳಿಗೆ ಹಂಚುತ್ತಿದ್ದರೆ ತಾನೂ ಮುಂದೆ ಬಂದು ಅವನ್ನು ಮಕ್ಕಳಿಗೆಲ್ಲ ಹಂಚಿಕೊಡುವನು. ಆಟದ ಸಾಮಾನುಗಳನ್ನು ಬಳಸಿ ಆಡುವುದು, ಜೋಡಿಸುವುದನ್ನು ತೋರಿಸಿಕೊಡುತ್ತಿದ್ದರೆ ತಾನೂ ತಪ್ಪಿಲ್ಲದಂತೆ ಹಾಗೆಯೇ ಮಾಡಿ ತೋರಿಸುವನು. ಮಕ್ಕಳ ಕೆಲಸದಲ್ಲಿ ಶಿಕ್ಷಕಿ ನೆರವಾಗುತ್ತಿದ್ದರೆ ತಾನೂ ಏನಾದರೂ ಸಹಾಯ ಮಾಡಲು ಮುಂದಾಗುವನು. ಆಟದಲ್ಲಿ ಹಿಂದುಳಿದ ಮತ್ತು ಆಡಲೊಲ್ಲದ ಮಕ್ಕಳನ್ನು ಶಿಕ್ಷಕಿ ಲೀಲಾ ಓಲೈಸಿ ಪ್ರೋತ್ಸಾಹಿಸುವುದನ್ನು ಕಂಡು ತಾನೂ ಹಾಗೆಯೇ ಮಾಡುವನು. ಮಕ್ಕಳನ್ನು ಕೈಹಿಡಿದುಕೊಂಡು ಮುಂದೆ ಕರೆದುತಂದು ಆಡುವಂತೆ ಪ್ರೇರಿಸುವನು.

ಲೀಲಾ ಹಾಜರಿ ಪುಸ್ತಕವನ್ನು ತೆರೆದು ಮಕ್ಕಳ ಹೆಸರುಗಳನ್ನು ಒಂದೊಂದಾಗಿ ಕರೆಯತೊಡಗುವರು. ಅಷ್ಟೇ ಗಟ್ಟಿಯಾದ ಧ್ವನಿಯಲ್ಲಿ ಅನಂತನೂ ಮಗುವಿನ ಹೆಸರನ್ನು ಕರೆಯುವನು. ಲೀಲಾರವರನ್ನು ಅನುಸರಿಸಿ, ಹಾಜರಾತಿ ಪುಸ್ತಕದಲ್ಲಿರುವ ಅಷ್ಟೂ

ಪುಟ 4 ರಲ್ಲಿ ಮುಂದುವರೆದಿದೆ

ಹೆಸರುಗಳನ್ನು ಅವನು ದಿನದಿನವೂ ಕರೆಯುತ್ತ ಎಷ್ಟರಮಟ್ಟಿಗೆ ರೂಢಿ ಮಾಡಿಕೊಂಡಿದ್ದನೆಂದರೆ ಕೆಲವೇ ದಿನಗಳಲ್ಲಿ ಅವನಿಗೆ ಎಲ್ಲರ ಹೆಸರುಗಳೂ ಕಂಠಪಾಠವಾಗಿಬಿಟ್ಟಿದ್ದವು.

ಹೊರಾಂಗಣ ಆಟಗಳಲ್ಲೂ ಅನಂತಕುಮಾರನ ಸಾಹಸಶೀಲತೆ, ಧೈರ್ಯ ಎದ್ದು ಕಾಣುವಂತಿತ್ತು. ಜಾರುಬಂಡೆಯಿರಲಿ, ಉಯ್ಯಾಲೆಯಾಟವಿರಲಿ ಇವನು ಮುಂದಾಳಾಗಿ ಹೋಗುತ್ತಿದ್ದ. ಕಪ್ಪೆಯಂತೆ ಕುಪ್ಪಳಿಸುವುದು, ಹಕ್ಕಿಯಂತೆ ಹಾರುವ ಅಭಿನಯ ಎಲ್ಲದರಲ್ಲೂ ಅವನ ಪ್ರದರ್ಶನ ಎದ್ದು ತೋರುವ ಹಾಗಿತ್ತು. ಅನಂತಕುಮಾರ ಮಕ್ಕಳಿಗೆ ಮುಖಂಡನಂತೆ ವರ್ತಿಸುವ ರೀತಿಯನ್ನು ಕಂಡು ಶಿಕ್ಷಕರೂ, ಅಲ್ಲಿಗೆ ಬರುತ್ತಿದ್ದ ಮಕ್ಕಳ ಪಾಲಕರೂ ಅಚ್ಚರಿಪಡುತ್ತಿದ್ದರು. ಅವರೆಲ್ಲ ನರಹರಿ ಶಾಸ್ತ್ರಿಗಳ ಪರಿಚಯವಿದ್ದವರೇ. ತಾತನ ಪ್ರತಿಭೆ, ಬುದ್ಧಿಶಕ್ತಿಗಳು ಮೊಮ್ಮಗನಲ್ಲೂ ಮೈಗೂಡಿರುವುದರಲ್ಲಿ ಸಂಶಯವಿಲ್ಲ ಎಂದು ಅವರು ಹೇಳಿಕೊಳ್ಳುತ್ತಿದ್ದರು. ಭಗಿನೀ ಸೇವಾ ಸಮಾಜದಲ್ಲಿ ತಾನು ಇದ್ದಷ್ಟು ದಿನ ಅನಂತಕುಮಾರ ಅಲ್ಲಿದ್ದವರೆಲ್ಲರ ಮೆಚ್ಚಿನ ವಿದ್ಯಾರ್ಥಿಯೆನಿಸಿದ್ದ.ಅಲ್ಪಕಾಲದ ಭೇಟಿಗಾಗಿ ಅನಂತಕುಮಾರ್ ಮೈಸೂರಿಗೆ ಬಂದಾಗಲೆಲ್ಲ ಅವನ ಯೋಗಕ್ಷೇಮದ ಜವಾಬ್ದಾರಿಯನ್ನು ಸಂತೋಷದಿಂದ ನಿರ್ವಹಿಸುತ್ತಿದ್ದವನು ಮೋಹನರಾಜ್. ಮೋಹನರಾಜ್ ನಾರಾಯಣ ಶಾಸ್ತ್ರಿಯ ಸೋದರಸಂಬಂಧಿ, ರಾಮಮೂರ್ತಿ ಮತ್ತು ಲೀಲಾರವರ ತಮ್ಮ. ಆಗ ಆತನಿನ್ನೂ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿ. ತಾತ ನರಹರಿ ಶಾಸ್ತ್ರಿಗಳು ಅನಂತನನ್ನು ನೋಡಿಕೊಳ್ಳುವ ಹಾಗೂ ಅವನೊಡನೆ ಆಟವಾಡುವ ಜವಾಬ್ದಾರಿಯನ್ನು ಮೋಹನರಾಜನಿಗೆ ವಹಿಸಿಕೊಟ್ಟಿದ್ದರು. ಪಾರ್ಕಿನಲ್ಲಿ ಓಡಾಟ, ಕಣ್ಣಾಮುಚ್ಚಾಲೆ ಆಟ, ತೂಗುಮಣೆ ಅಥವಾ ಜೋಕಾಲಿ, ಜಾರುಬಂಡೆಯಿಂದ ಜಾರುವುದೇ ಮೊದಲಾದ ಆಟಗಳನ್ನು ಆಡಿಸಲು ಮೋಹನರಾಜ್ ಅನಂತನನ್ನು ಹತ್ತಿರದಲ್ಲಿದ್ದ ಗಣೇಶ ಪಾರ್ಕ್ ಇಲ್ಲವೇ ನ್ಯಾಯಾಲಯದ ಬಳಿ ಇದ್ದ ಮನುವನ ಪಾರ್ಕಿಗೆ ಕರೆದೊಯ್ಯುತ್ತಿದ್ದ. ಪಾರ್ಕಿನಲ್ಲಿದ್ದ ಇತರ ಹುಡುಗರೂ ಅವರೊಡನೆ ಸೇರುತ್ತಿದ್ದರು. ಅನಂತನೊಡನೆ ಸ್ವಲ್ಪ ಸಮಯ ಕಳೆಯುತ್ತಿದ್ದ ಆ ದಿನಗಳು ಮೋಹನರಾಜ್ ಪಾಲಿಗೆ ಬಹಳ ಸಂತೋಷದ ದಿನಗಳಾಗಿದ್ದವು.

ಆ ವಯಸ್ಸಿನಲ್ಲಿಯೇ ಅನಂತನಿಗೆ ತಿನಿಸುಗಳೆಂದರೆ ಬಲು ಇಷ್ಟ.




ಪಾರ್ಕಿನಲ್ಲಿ ಹುಡುಗರು ಮಾರುತ್ತಿದ್ದ ಚಿಕ್ಕಿಯನ್ನೋ ಅಥವಾ ಹುರಿದ ಕಡಲೆಕಾಯಿ ಬೀಜವನ್ನೋ ತಿನ್ನಲು ಕೊಡಿಸು ಎನ್ನುತ್ತಿದ್ದ. ಏನನ್ನಾದರೂ ಕೊಡಿಸೋಣವೆಂದರೆ ಮೋಹನರಾಜ್ ಹತ್ತಿರ ಹಣವಿದ್ದರಲ್ಲವೆ? ಅಳಲು ತೊಡಗುತ್ತಿದ್ದ ಅವನನ್ನು ಹೇಗಾದರೂ ಸಮಾಧಾನಪಡಿಸಿ ಮನೆಗೆ ಕರೆದುಕೊಂಡು ಬರಬೇಕಾಗಿತ್ತು. ಮನೆಗೆ ಬಂದ ಮೇಲೆ ತನ್ನ ಅಜ್ಜಿ ಕೊಡುತ್ತಿದ್ದ ಕೊಬ್ಬರಿ ಬೆಲ್ಲದಿಂದಲೋ ಕೊಬ್ಬರಿ ಮಿಠಾಯಿಯಿಂದಲೋ ಅನಂತ ಸಂತೋಷಪಟ್ಟುಕೊಳ್ಳುತ್ತಿದ್ದ. ಅನಂತನಿಗೆ ಆಗ ಮೂರು ಮೂರೂವರೆ ವರ್ಷವಿರಬೇಕು. ಇಷ್ಟು ಸಣ್ಣ ಹುಡುಗ ಅನಂತ ತನ್ನ ಎರಡು ವರ್ಷ ವಯಸ್ಸಿನ ತಂಗಿಯನ್ನು ಬಹಳ ಜೋಪಾನವಾಗಿ ನೋಡಿಕೊಳ್ಳುತ್ತಿದ್ದ, ಅವಳೊಬ್ಬಳೇ ಇರಲು ಬಿಡುತ್ತಿರಲಿಲ್ಲ. ಮನೆ ತುಂಬಾ ಜನರಿದ್ದರೂ ಎಲ್ಲರೂ ಅವರವರ ಕೆಲಸಗಳಲ್ಲಿ ಮಗ್ನರಾಗಿರುತ್ತಿದ್ದರು. ಹೀಗಾಗಿ ಈ ಸಣ್ಣ ಮಕ್ಕಳಿಗೆ ಯಾರೂ ತಮ್ಮನ್ನು ನೋಡಿಕೊಳ್ಳುತ್ತಿಲ್ಲ ಎಂಬಂತಾಗಿತ್ತು. ಆಗ ಮೋಹನರಾಜ್ ಅನಂತನೊಡನೆ ಆತ್ಮೀಯ ಒಡನಾಟವನ್ನು ಬೆಳೆಸಿಕೊಂಡ. ಅವನೊಡನೆ ಕ್ರಿಕೆಟ್ ಆಡುತ್ತಲೋ ಅಥವಾ ಮನೆಯ ಹತ್ತಿರವೇ ಯಾವುದಾದರೂ ಆಟದ ಚಟುವಟಿಕೆಯಲ್ಲೋ ತೊಡಗಿ ಅವನನ್ನು ತನ್ನ ಜೊತೆಗೇ ಉಳಿಸಿಕೊಳ್ಳುತ್ತಿದ್ದ.

# ಸರಳ ಯೋಗಾಭ್ಯಾಸ

ಎಸ್. ರಾಘವೇಂದ್ರ ಪ್ರಸಾದ್
ಅಧ್ಯಕ್ಷರು - ಸಹಬಾಳ್ವೆ

## ಉತ್ಕಟಾಸನ - Chair Posture

**ಕುರ್ಚಿಯಲ್ಲಿ ಕುಳಿತುಕೊಳ್ಳುವ ರೀತಿಯಲ್ಲಿ ದೇಹದ ಭಂಗಿಯನ್ನು ತೊಡಗಿಸಿಕೊಳ್ಳುವ ಆಸನವನ್ನು 'ಉತ್ಕಟಾಸನ' ಎಂದು ಕರೆಯುತ್ತಾರೆ.**

**ಆಸನ ಮಾಡುವ ವಿಧಾನ:** 1) ಮೊದಲು ನೇರವಾಗಿ ಸಮಸ್ಥಿತಿಯಲ್ಲಿ ನಿಂತು ಕೊಳ್ಳಬೇಕು. 2) ಉಸಿರನ್ನು ತೆಗೆದುಕೊಳ್ಳುತ್ತ ಎರಡು ಕೈಗಳನ್ನು ನಿಧಾನವಾಗಿ ಭುಜದ ಮಟ್ಟಕ್ಕೆ ತೆಗೆದುಕೊಂಡು ಹೋಗುವುದು ಹಾಗೂ ಅಂಗೈಗಳನ್ನು ಕೆಳಮುಖವಾಗಿ ಮಾಡವುದು. 3) ಉಸಿರನ್ನು ಬಿಡುತ್ತ ಮಂಡಿಗಳನ್ನು ನಿಧಾನವಾಗಿ ಬಗ್ಗಿಸಿ ಕುರ್ಚಿಯ ಭಂಗಿಯಲ್ಲಿ ನಿಲ್ಲಬೇಕು. ಮೊದಮೊದಲು ಈ ಭಂಗಿಯಲ್ಲಿ 15 - 30 ಸೆಕೆಂಡುಗಳು ನಿಲ್ಲಲು ಪ್ರಯತ್ನಿಸಿ. 4) ಅಂತಿಮ ಭಂಗಿಯಲ್ಲಿ ತೋಳುಗಳು ಮತ್ತು ತೊಡೆಗಳು ನೆಲಕ್ಕೆ ಸಮಾನಾಂತರವಾಗಿ (Parallel to the ground) ಇರಬೇಕು. 5) ನಂತರ ಉಸಿರು ತೆಗೆದುಕೊಂಡು ನಿಧಾನವಾಗಿ ಮೇಲಕ್ಕೆ ಬಂದು ಉಸಿರು ಬಿಡುತ್ತಾ ಕೈಗಳನ್ನು ಕೆಳಗಿಳಿಸಿ ಸಮಸ್ಥಿತಿಯಲ್ಲಿ ಕೊಂಚ ಹೊತ್ತು ವಿಶ್ರಮಿಸುವುದು. 6) ಎರಡು ಅಥವಾ ಮೂರು ಬಾರಿ ಪುನರಾವರ್ತನೆ ಮಾಡಬಹುದು.

**ಆಸನದ ಪ್ರಯೋಜನಗಳು:** 1) ಕಾಲು, ಮೊಣಕಾಲು, ತೊಡೆ ಮತ್ತು ಸೊಂಟದ ಭಾಗದಲ್ಲಿ ಶಕ್ತಿ ವೃದ್ಧಿಸುತ್ತದೆ. 2) ಹೊಟ್ಟೆ ಮತ್ತು ತೊಡೆಗಳ ಕೊಬ್ಬಿನ ಅಂಶ ಕರಗುತ್ತದೆ. 3) ಸಾಮಾನ್ಯ ಬೆನ್ನು ನೋವಿಗೆ ಸಹಾಯಕವಾದ ಆಸನ. 4) ದೇಹದ ಸಮತೋಲನಕ್ಕೆ ಮತ್ತು ಮಾನಸಿಕ ಸ್ಥಿರತೆಗೆ ಸಹಾಯ ಮಾಡುತ್ತದೆ.

**ಎಚ್ಚರ ವಹಿಸಬೇಕಾದವರು:** 1) ಹೆಚ್ಚಿನ ಮಂಡಿ ತೊಂದರೆ, ಸಂಧಿವಾತ ಇರುವವರು ಈ ಆಸನ ಮಾಡಬಾರದು. 2) ಅತೀವ ರಕ್ತದೊತ್ತಡ, Migraine, Vertigo ಸಮಸ್ಯೆ ಇದ್ದಾಗ ಈ ಆಸನದಿಂದ ದೂರವಿರಬೇಕು. 3) ಕಾಲು, ಬೆನ್ನು ಈ ರೀತಿಯ ಶಸ್ತ್ರ ಚಿಕಿತ್ಸೆಗೆ ಒಳಗಾದವರು ಆಸನ ಮಾಡಬಾರದು. 4) ಯಾವುದಕ್ಕೂ ನುರಿತ ತಜ್ಞರ ಸಲಹೆ ಪಡೆದು ಈ ಆಸನ ಮಾಡುವುದು ಒಳ್ಳೆಯದು.



# ಹುಬ್ಬಳ್ಳಿಯಲ್ಲಿ ಅನಂತ ಪ್ರೇರಣಾ ಕೇಂದ್ರ



ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಅನಂತಕುಮಾರರ ಜೊತೆ ಸೆರೆವಾಸ ಅನುಭವಿಸಿದ ಸ್ನೇಹಿತರಾದ ಸರ್ವಶ್ರೀ ವಿಷ್ಣುಕಾಂತ್ ಚಟಪಲ್ಲಿ, ಗುಡ್ಡು ಇನಾಂದಾರ್, ಅಚ್ಯುತ್ ಲಿಮಯೆ, ಹಾಗೂ ರಮೇಶ್ ಹೆಗಡೆ ಅವರನ್ನು ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ಸನ್ಮಾನಿಸಲಾಯಿತು.

ಇಡೀ ಭಾರತವೇ ತಮ್ಮ ಕರ್ಮಭೂಮಿಯಾಗಿದ್ದರೂ ಅನಂತಕುಮಾರರು ತಮ್ಮ ಜನ್ಮಭೂಮಿಯನ್ನು ಮರೆತವರಲ್ಲ. ಹುಬ್ಬಳ್ಳಿ ನಗರವೂ ಅವರನ್ನು ಮರೆಯುವುದಿಲ್ಲ ಎಂಬುದು ಅನಂತ ಪ್ರೇರಣಾ ಕೇಂದ್ರದ ಉದ್ಘಾಟನಾ ಸಮಾರಂಭ ನಿರೂಪಿಸಿತು. ಅನಂತಕುಮಾರರ ಜೀವನವೇ ಒಂದು ಪಾಠಶಾಲೆ. ಈ ಪಾಠಶಾಲೆ ಇದೀಗ ಹುಬ್ಬಳ್ಳಿಯ ವಿಜಯನಗರದ 'ಗುರುಪ್ರಭಾ' ಕಟ್ಟಡದಲ್ಲಿ ಪ್ರಾರಂಭವಾಗಿ ಹಿರಿಕಿರಿಯರೆಲ್ಲರ ಪ್ರೇರಣಾ ಕೇಂದ್ರವಾಗಿದೆ.

ವಿಆರ್‌ಎಲ್ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಡಾ. ವಿಜಯ ಸಂಕೇಶ್ವರ, ಆರೆಸ್ಸೆಸ್ ಪ್ರಚಾರಕರಾದ ಶ್ರೀ ಸು ರಾಮಣ್ಣ, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ|| ಪಿ ವಿ ಕೃಷ್ಣಭಟ್ ಮತ್ತು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತಿತರ ಗಣ್ಯರು ದಿನಾಂಕ 05/03/2023 ರಂದು ದೀಪ ಬೆಳಗಿಸುವ ಮೂಲಕ ಅನಂತ ಪ್ರೇರಣಾ ಕೇಂದ್ರವನ್ನು ಉದ್ಘಾಟನೆ ಮಾಡಿದರು. ಎಲ್ಲ ಗಣ್ಯರೂ ಅನಂತಕುಮಾರರಿಗೆ ಸಂಬಂಧಿಸಿದ ಭಾವಚಿತ್ರಗಳು, ಸ್ಮರಣಿಕೆಗಳು, ಪತ್ರಿಕಾ ವರದಿಗಳು, ಅವರ ಮನೆ/ಕಚೇರಿಗಳ ವಸ್ತುಗಳನ್ನು ವೀಕ್ಷಿಸಿ ಭಾವುಕರಾದರು. ಜೊತೆಗೆ, ಅನಂತಕುಮಾರರ ಜೀವನಕ್ಕೆ ಸಂಬಂಧಿಸಿ ನುಡಿಚಿತ್ರವನ್ನೂ ವೀಕ್ಷಿಸಿದರು. ಈ ಸಮಾರಂಭಕ್ಕೆ ಮುನ್ನ ಹೆಸರಾಂತ ಋತ್ವಿಜರು ಗಣಹೋಮವನ್ನು ಸಾಂಗವಾಗಿ ನೆರವೇರಿಸಿಕೊಟ್ಟು ಒಂದು ದೈವಿಕ ವಾತಾವರಣವನ್ನು ಸೃಷ್ಟಿಸಿದ್ದರು. ಇದೇ ಕಟ್ಟಡದಲ್ಲಿ ಪ್ರಾರಂಭವಾಗಿರುವ ಪ್ಲೇಟ್ ಬ್ಯಾಂಕನ್ನು ಕೂಡ ಉದ್ಘಾಟಿಸಲಾಯಿತು.

ಪ್ರೇರಣಾ ಕೇಂದ್ರದ ಉದ್ಘಾಟನೆಯ ಸಭಾ ಕಾರ್ಯಕ್ರಮವನ್ನು ಪಕ್ಕದಲ್ಲಿಯೇ ಇದ್ದ ಕೆಂಪಣ್ಣನವರ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿತ್ತು. ಶ್ರೀ ನರಸಿಂಹ ಪರಾಂಜಪೆಯವರು ಬರೆದ ಅನಂತದಾಕಾಶ ಹಾಡನ್ನು ಡಾ. ಪದ್ಮಿನಿ ಓಕ್ ಅವರು ಭಾವಪೂರ್ಣವಾಗಿ ಹಾಡುವುದರ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅತಿಥಿಗಳನ್ನು ಸ್ವಾಗತಿಸಿದರು. ಅತಿಥಿಗಳಾಗಿ ಆಗಮಿಸಿದ್ದ, ಶ್ರೀ ವಿಜಯ್ ಸಂಕೇಶ್ವರ, ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿ, ಶ್ರೀ ಸು ರಾಮಣ್ಣ, ಶ್ರೀಮತಿ ಶಿಲ್ಪಾ ಶೆಟ್ಟರ್, ಶ್ರೀ ಗೋವಿಂದ ಜೋಶಿ, ಲಿಮಯೆ ದಂಪತಿಗಳು ಮತ್ತು ಪ್ರೊ|| ಪಿ ವಿ ಕೃಷ್ಣಭಟ್, ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀ ಗುಡ್ಡು ಇನಾಂದಾರ್, ಶ್ರೀಮತಿ ಐಶ್ವರ್ಯಾ, ಕುಮಾರಿ ವಿಜೇತಾ, ಶ್ರೀಮತಿ ರಾಧಿಕಾ ಓಕ್, ಶ್ರೀ ಲಕ್ಷ್ಮಣರಾವ್ ಓಕ್, ಶ್ರೀ ರಂಗಾ ಬದ್ಧಿ, ಶ್ರೀ ಸುಖನ್ ರಾಜ್ ಬಾಫ್ನಾ, ಶ್ರೀ ರತನ್, ಶ್ರೀ ಎಚ್. ಎನ್. ನಂದ ಕುಮಾರ್, ಶ್ರೀ ರವಿ ಎಲಿಗಾರ್, ಶ್ರೀ ಪ್ರಕಾಶ್ ನಾಝುರೆ, ಡಾ. ಜಿ. ಎಚ್. ನರೇಗಲ್, ಶ್ರೀ ದತ್ತಾ ಡೋರ್ಲೆ, ಶ್ರೀ ಹೇಮರಾಜ್ ಭಂಡಾರಿ, ಶ್ರೀ ಅಶೋಕ್ ಕಾಟವೆ, ಶ್ರೀ ಜನಾರ್ದನ ತುಂಗ, ಶ್ರೀ ಪೂರ್ಣ ಪ್ರಜ್ಞ ಮುಂತಾದವರು ಭಾಗವಹಿಸಿ ಅನಂತಕುಮಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಅನಂತಕುಮಾರರ ಅಭಿಮಾನಿಗಳಿಂದ ಮತ್ತು ಹಿತೈಷಿಗಳಿಂದ ತುಂಬಿದ್ದ ಸಭೆಯನ್ನುದ್ದೇಶಿಸಿ ಮಾತನಾಡಿದ ಶ್ರೀ ಬಸವರಾಜ ಹೊರಟ್ಟಿಯವರು ಬದುಕಿದರೂ ಸತ್ತಂತಿರುವವರ ನಡುವೆ ನಿಧನರಾಗಿಯೂ ಬದುಕುತ್ತಿರುವ ಅನಂತಕುಮಾರರ ಸ್ನೇಹ ಮತ್ತು ಕರ್ತೃತ್ವಗಳನ್ನು ನೆನಪಿಸಿಕೊಂಡರು. ನಂತರ ಮಾತನಾಡಿದ ಶ್ರೀ ವಿಜಯ ಸಂಕೇಶ್ವರ ಅವರು ಅನಂತಕುಮಾರರ ಜೊತೆಗಿನ ತಮ್ಮ ಒಡನಾಟವನ್ನು ಆತ್ಮೀಯವಾಗಿ ಸ್ಮರಿಸಿಕೊಂಡರು. ಸು ರಾಮಣ್ಣನವರು ಅನಂತಕುಮಾರರ ಸದಸದ್ವಿವೇಕವನ್ನು ಪ್ರಸ್ತಾಪಿಸುತ್ತ ದೊಡ್ಡವರ ಬದುಕು ಕೇವಲ ಬದುಕಲ್ಲ, ಅದು ವಾರಸಿಕೆ. ಅನಂತಕುಮಾರರು ತಮ್ಮ ವಾರಸಿಕೆಯನ್ನು ಬಿಟ್ಟು ಹೋಗಿದ್ದಾರೆ. ಅದನ್ನು ನಿಭಾಯಿಸುವ ಕರ್ತವ್ಯ ನಮ್ಮದು ಎಂದು ಹೇಳಿದರು. (ಭಾಷಣದ ಸಾರಾಂಶವನ್ನು ಇದೇ ಸಂಚಿಕೆಯ ಬೇರೆಡೆ ಲೇಖನ ರೂಪದಲ್ಲಿ ನೀಡಲಾಗಿದೆ)

ಸಭೆಯನ್ನುದ್ದೇಶಿಸಿ ಶ್ರೀ ನರಸಿಂಹ ಪರಾಂಜಪೆ, ಶ್ರೀಮತಿ ಶಿಲ್ಪಾ ಶೆಟ್ಟರ್, ಸುಧೀರ್ ಮೂರ್ತಿ, ಶ್ರೀ ಮ. ನಾಗರಾಜ್, ಡಾ. ವ್ಯಾಸ್ ದೇಶಪಾಂಡೆ, ಅನಘಾ ಲಿಮಯೆ, ಟಿ ಎಸ್ ಗೋಪಾಲ್, ಅಶೋಕ ಪಾಳಂದೆ, ರಘು ಅಕ್ಮಂಚಿ, ಮುಂತಾದವರು ಮಾತನಾಡಿದರು.

ಕಾರ್ಯಕ್ರಮದ ಅಂಗವಾಗಿ, ತುರ್ತುಪರಿಸ್ಥಿತಿಯ ಕಾಲದಲ್ಲಿ ಅನಂತಕುಮಾರರ ಜೊತೆ ಜೈಲುವಾಸ ಅನುಭವಿಸಿದ್ದ ಶ್ರೀ ವಿಷ್ಣುಕಾಂತ ಚಟಪಲ್ಲಿ, ಶ್ರೀ ಗುಡ್ಡು ಇನಾಂದಾರ್, ಶ್ರೀ ಅಚ್ಯುತ ಲಿಮಯೆ ಮತ್ತು ಶ್ರೀ ರಮೇಶ ಹೆಗಡೆಯವರನ್ನು ಸನ್ಮಾನಿಸಲಾಯಿತು. ಶ್ರೀಮತಿ ಐಶ್ವರ್ಯಾ ಅನಂತಕುಮಾರ್ ವಂದನಾರ್ಪಣೆ ಮಾಡಿದರು. ಶ್ರೀಮತಿ ವೀಣಾ ಭಟ್, ಸಮಾರಂಭವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು, ಇಡೀ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಲು ಹಗಲಿರುಳು ದುಡಿದ ಕಾರ್ಯಕರ್ತರ ಅನಂತನಿಷ್ಠೆಯನ್ನು ಗೌರವಿಸಿ ಎಲ್ಲರಿಗೂ ಸ್ಮರಣಿಕೆಗಳನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಪ್ರೊ|| ಪಿ ವಿ ಕೃಷ್ಣಭಟ್, ಶ್ರೀ ಪ್ರದೀಪ್ ಓಕ್ ಮತ್ತಿತರ ಹಿರಿಯರು ನೀಡಿದರು.

## ಗೀತೆಯ ಸಂದೇಶ



ಶ್ರೀ ಕೃಷ್ಣ ಸಂಪಗಾಂವಕರ, ಶಾಂತಿ ಕುಟೀರ, ಕನ್ನೂರ

ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ |

ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ || 2-28

ಹೇ ಅರ್ಜುನ! ಸಕಲ ಪ್ರಾಣಿಗಳು ಜನ್ಮ ತಾಳುವ ಮುನ್ನ ಅಪ್ರಕಟರಾಗಿದ್ದರು. ಸತ್ತಮೇಲೆ ಅಪ್ರಕಟವಾಗುವರು. ಕೇವಲ ಮಧ್ಯದಲ್ಲಿ ಮಾತ್ರ ಪ್ರಕಟವಾಗಿ ಕಾಣಿಸುವರು. ಹೀಗಿದ್ದಾಗ ಅದಕ್ಕಾಗಿ ಶೋಕಿಸುವುದೇಕೆ?

ವ್ಯಕ್ತ - ಅವ್ಯಕ್ತ; ಇರುವಿಕೆ - ಇಲ್ಲದಿರುವಿಕೆ; ನಿತ್ಯ- ಅನಿತ್ಯ: ಇವುಗಳ ಸಮೀಕ್ಷೆಯಿಂದ ನಮ್ಮಲ್ಲಿ ಸತ್ಯ ವಸ್ತುವಿನ ಬಗ್ಗೆ ಸ್ಪಷ್ಟತೆ ಉಂಟಾಗುವುದು. ನಿದ್ದೆಯ ಪೂರ್ವದಲ್ಲಿ ಕನಸು ಇಲ್ಲ, ಎಚ್ಚರವಾದ ಮೇಲೆಯೂ ಕನಸು ಇಲ್ಲ. ಹೀಗಾಗಿ ನಿದ್ರೆಯಲ್ಲಿ ಕಾಣುವ ಕನಸು ಸತ್ಯವಲ್ಲ ಎಂದು ನಮಗೆ ಚೆನ್ನಾಗಿ ತಿಳಿದಿದೆ. ಜೀವನು ಅವ್ಯಕ್ತದಿಂದ ಬಂದು, ಕೆಲ ಸಮಯ ವ್ಯಕ್ತ ರೂಪ ತಾಳಿ, ಪುನ: ಅವ್ಯಕ್ತ ಕಡೆಗೆ ಹೋಗುವನು. ಯಾವುದು ಪೂರ್ವದಲ್ಲಿ ಇರಲಿಲ್ಲವೋ, ಅಂತ್ಯದಲ್ಲಿಯೂ ಇರುವುದಿಲ್ಲವೋ, ಅದು ಮಧ್ಯದಲ್ಲಿ ಕಂಡರೂ ಶಾಶ್ವತವಲ್ಲ.

ತೋರಿ ಅಡಗುವ, ಇಲ್ಲದೆ ಇರುವ ವಸ್ತುವಿನ ಬಗ್ಗೆ ಶೋಕ ಸಲ್ಲದು.

ಎಲ್ಲ ಪ್ರಾಣಿಗಳ ಶರೀರಗಳು ಮೊದಲು ಇರಲಿಲ್ಲ, ಕೊನೆಗೂ ಇರುವುದಿಲ್ಲ ಆದರೆ ಶರೀರಿಯಾದ ಆತ್ಮತತ್ವ ಮೊದಲೂ, ಈಗಲೂ ಹಾಗೂ ಇನ್ನು ಮುಂದೆಯೂ ಇರುವ ವಸ್ತು. ಆ ಆತ್ಮನೇ ನೀನು, ಮಧ್ಯೆ ಕಾಣುವ ಮೊದಲೂ ಕೊನೆಯಲ್ಲೂ ಇಲ್ಲದಾಗುವ ಶರೀರವಲ್ಲ.

ಪುಟ 1 ರಿಂದ

# ‘ಸಾಮಾನ್ಯ ಹಿನ್ನೆಲೆಯ ಅಸಾಮಾನ್ಯ ಸಾಧಕ’ ಅನಂತಕುಮಾರ್

ಆ ಸಂದರ್ಭದಲ್ಲಿಯೂ ಯಡಿಯೂರಪ್ಪ ಹಾಗೂ ಅನಂತಕುಮಾರ್ ಜೊತೆಗೆ ಸುಮಾರು ಹತ್ತು ತಾಸು ಕಾರಿನಲ್ಲಿ ಓಡಾಡುವ ಅವಕಾಶ ನನಗೆ ಒಮ್ಮೆ ದೊರಕಿತ್ತು. 1989ರಿಂದ ಹಂತಹಂತವಾಗಿ ಮೇಲೇರಿದ ಅನಂತಕುಮಾರ್ ಸಾಕಷ್ಟು ತೊಂದರೆ ಅನುಭವಿಸಿದರೂ ತಮ್ಮ ಕೊನೆಯ ಉಸಿರಿನವರೆಗೂ ಹಸನ್ಮುಖಿಯಾಗಿದ್ದರು.

ಅನಂತಕುಮಾರರಿಗೆ ಮದುವೆಯಾಗುವ ವಯಸ್ಸಿನಲ್ಲಿ ಯಾವ ಆದಾಯವೂ ಇರಲಿಲ್ಲ. ಇಂಥವರನ್ನು ಮದುವೆಯಾಗಲು ಮುಂದೆ ಬರುವವರು ಯಾರು? ಆಗಿನ ಕಾಲದ ತರುಣಿಯರು ತಾವು ಮದುವೆಯಾಗುವವರು ಇಂಗ್ಲೆಂಡ್ ಅಥವಾ ಅಮೇರಿಕದಲ್ಲಿರಬೇಕು ಎಂದು ಆಶಿಸುತ್ತಿದ್ದರು. ಅಂತಹ ಕಾಲದಲ್ಲಿ ಸಹೋದರಿ ತೇಜಸ್ವಿನಿ ಅನಂತಕುಮಾರರ ಕೈ ಹಿಡಿದರು. ಅನಂತಕುಮಾರ್ -ತೇಜಸ್ವಿನಿಯವರದು ಕೂಡ ಒಂದು ಅದ್ಭುತ ಜೋಡಿ. ತೇಜಸ್ವಿನಿಯವರು ಅನಂತಕುಮಾರರಿಗೆ ಹೆಗಲೆಣೆಯಾಗಿ ಅವರ ಪ್ರತಿಯೊಂದು ಕಾರ್ಯವನ್ನೂ ಮುನ್ನಡೆಸಿಕೊಂಡು ಸಾಗುತ್ತಿದ್ದಾರೆ.



ನಾನು ಮತ್ತು ಅನಂತಕುಮಾರ್ 1996ರ ಲೋಕಸಭಾ ಚುನಾವಣೆಯಲ್ಲಿ ಗೆದ್ದು ಮೊದಲಬಾರಿಗೆ ಸಂಸತ್ತನ್ನು ಪ್ರವೇಶಿಸಿದಾಗ ಪಾರ್ಲಿಮೆಂಟ್ ಕಟ್ಟಡಕ್ಕೆ 10-20 ಬಾಗಿಲುಗಳಿರುವುದನ್ನು ನೋಡಿ ಗಲಿಬಿಲಿಗೊಂಡಿದ್ದೆವು. ನಮಗಿನ್ನೂ ಆಸನಗಳ ಹಂಚಿಕೆಯಾಗಿರಲಿಲ್ಲ. ಎಲ್ಲ ಗಲಿಬಿಲಿಗಳ ನಡುವೆಯೂ ಪ್ರಮಾಣ ವಚನ ಸ್ವೀಕರಿಸುವಾಗ ಅನಂತಕುಮಾರರ ಇಡೀ ಕುಟುಂಬ ಹಾಜರಿದ್ದು ಆನಂದಿಸಿತು. ವಾಜಪೇಯಿಯವರ ಸರಕಾರ 13 ದಿನದಲ್ಲಿಯೇ ರಾಜೀನಾಮೆ ನೀಡಿ ದೇವೇಗೌಡರ ಸರಕಾರ ಬಂದಾಗ ಬಿಜೆಪಿಯು ತುಂಬ ಅಸ್ಥಿರ ಪರಿಸ್ಥಿತಿಯನ್ನು, ಅನೇಕ ಸಮಸ್ಯೆಗಳನ್ನು ಎದುರಿಸುತ್ತಿತ್ತು. ಕರ್ನಾಟಕದ ಎಲ್ಲ ಎಂಪಿಗಳು ಹತಾಶೆಯಿಂದಿದ್ದರು. ದೆಹಲಿಯ ರಸ್ತೆಗಳಲ್ಲಿ ಅಲೆದಾಡುವಾಗ ಅನಂತಕುಮಾರರು ದೆಹಲಿಯಲ್ಲಿ ಕೆಲಸವಿಲ್ಲದೆ ಅಲೆದಾಡುವ ಬದಲು ಕರ್ನಾಟಕಕ್ಕೆ ಮರಳಿ ಎಂಎಲ್ಎ ಆದರೂ ಮುಂದಿನ 20 ವರ್ಷಕ್ಕೆ ನಾನು ಮುಖ್ಯಮಂತ್ರಿ ಆಗಬಹುದು ಎಂದು ಹೇಳಿದ್ದರು. ಅದಕ್ಕೆ ನಾನು, ನೀವು ಸಿಎಂ ಗಿಂತ ಪಿಎಂ ಆಗುವ ಯೋಗ್ಯತೆ ಇರುವವರು, ನೀವು ದೆಹಲಿಯಲ್ಲಿಯೇ ಇರಬೇಕು. 25 ವರ್ಷ ಕಾಯುತ್ತಿರಿ, ಎಂದೆ. ಅವರು “ನಿಮ್ಮ ಭವಿಷ್ಯ ಅಷ್ಟು ನಿಖರವೇ? ತಪ್ಪಿದರೆ ತಲೆದಂಡ ಕೊಡುತ್ತೀರಾ” ಎಂದು ಕೇಳಿದರು. “ನನ್ನ ಭವಿಷ್ಯ ತಪ್ಪಿದರೆ ವಿಆರ್ಎಲ್ ಸಂಸ್ಥೆಯನ್ನೇ ಬರೆದುಕೊಡುತ್ತೇನೆ” ಎಂದಿದ್ದೆ. ಅನಂತಕುಮಾರ್ ಸದಾ ಕಾಲ ಬಹಳ ಸ್ಫೂರ್ತಿಯಿಂದ ಇರುತ್ತಿದ್ದರು. 50 ಜನ್ಮಗಳಲ್ಲಿ ಮಾಡುವ ಕೆಲಸವನ್ನು, 50 ಜನ್ಮಗಳಲ್ಲಿ ಮಾಡುವ ಊಟವನ್ನು ಒಂದೇ ಜನ್ಮದಲ್ಲಿ ಮಾಡಿದ್ದಾರೆ. 50 ಜನ್ಮಗಳಲ್ಲಿ ಎದುರಾಗುವ ಕಷ್ಟಗಳನ್ನು ಒಂದೇ ಜನ್ಮದಲ್ಲಿ ಅನುಭವಿಸಿದ್ದಾರೆ. ಕಷ್ಟದಲ್ಲಿ ಕೂಡ ನಗುತ್ತಾ ಸಂತೋಷದಿಂದ ಇರುತ್ತಿದ್ದರು. ಅಂತಹ ಅದ್ಭುತ ಚೇತನದ ಸಂಕಲ್ಪಬಲದಿಂದ, ಸಂಘ ಪರಿವಾರದ ಸಹಕಾರದಿಂದ, ಆಶೀರ್ವಾದದಿಂದ, ಯಡಿಯೂರಪ್ಪ ಮತ್ತು ಅನಂತಕುಮಾರ್ ಅವರ ತ್ಯಾಗದಿಂದ ಭಾರತೀಯ ಜನತಾ ಪಕ್ಷವು ಕರ್ನಾಟಕದಲ್ಲಿ ಅತ್ಯುನ್ನತ ಮಟ್ಟಕ್ಕೆ ಬೆಳೆಯುತ್ತಿದೆ. ಇಂತಹ ಸಂದರ್ಭದಲ್ಲಿ ಹುಬ್ಬಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಪಕ್ಷದ ಕಚೇರಿ ಕಟ್ಟಡಕ್ಕೆ ಅನಂತಕುಮಾರರ ಹೆಸರನ್ನು ಇಡುವುದು ಸೂಕ್ತ ಎಂದು ನನ್ನ ಅನಿಸಿಕೆ. ಅನಾರೋಗ್ಯದ ನಿಮಿತ್ತ ಚಿಕಿತ್ಸೆಗಾಗಿ ಅಮೆರಿಕಾಗೆ ತೆರಳುವ ಮೊದಲು ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಧರ್ಮಪತ್ನಿ ಮತ್ತು ಸಹೋದರನ ಜೊತೆಗಿರುವ ಹುಟ್ಟುಹಬ್ಬದ ಫೋಟೋ ನೋಡಿದೆ. ಸಾವು ಎದುರಿಗೆ ಕಾಣುತ್ತಿದೆ, ಮುಂದಿನ ಹುಟ್ಟುಹಬ್ಬ ಆಚರಣೆ ಮಾಡುವ ಅವಕಾಶವಿಲ್ಲ ಎಂದು ತಿಳಿದಿದೆ. ಅಂತಹ ಸನ್ನಿವೇಶದಲ್ಲಿಯೂ ಹಸನ್ಮುಖದಿಂದ ವಿಜಯದ ಸಂಕೇತದ ಭಂಗಿಯಲ್ಲಿ ಕ್ಯಾಮೆರಾ ಎದುರಿಸಿದ್ದಾರೆ. ಅಂತಹ ಆತ್ಮಸ್ಥೈರ್ಯ ಅವರದು. ಅನಂತಕುಮಾರ್ ಅವರ ಯಶಸ್ಸಿನ ಹಿಂದೆ ತೇಜಸ್ವಿನಿಯವರ ಪಾತ್ರ ಬಹಳ ದೊಡ್ಡದು. ಅನಂತಕುಮಾರರ ಹಾದಿಯಲ್ಲಿಯೇ ಮುನ್ನಡೆಯುತ್ತಿರುವ ಶ್ರೀಮತಿ ತೇಜಸ್ವಿನಿಯವರು ಅದ್ಭುತವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಬೆಂಗಳೂರಿನ ಅದಮ್ಯಚೇತನದ ಶೂನ್ಯ ತ್ಯಾಜ್ಯ ರಹಿತ ಅಡುಗೆ ಮನೆ, 'ಅನ್ನಪೂರ್ಣ'. ಅಲ್ಲಿ ಯಾವುದೇ ಕಸ ಉತ್ಪತ್ತಿಯಾಗುವುದಿಲ್ಲ. ಯಾವುದೇ ಪಳೆಯುಳಿಕೆ ಇಂಧನವನ್ನು ಬಳಸದೆ ದಿನಂಪ್ರತಿ ಲಕ್ಷಾಂತರ ಊಟವನ್ನು ಸಿದ್ಧಪಡಿಸುವುದು ಒಂದು ಮಹತ್ಸಾಧನೆ. ಇಲ್ಲಿನ ಶೂನ್ಯ ತ್ಯಾಜ್ಯ ಪರಿಕಲ್ಪನೆಯನ್ನು ಮನೆಮನೆಗಳಲ್ಲಿಯೂ ಅಳವಡಿಸಿಕೊಳ್ಳಬಹುದು. ಹುಬ್ಬಳ್ಳಿಯಲ್ಲಿ ಅನಂತ ಪ್ರೇರಣಾ ಕೇಂದ್ರದ ವಸ್ತು ಸಂಗ್ರಹಾಲಯವನ್ನು ಬಹಳಷ್ಟು ಶ್ರಮವಹಿಸಿ ಪ್ರಾರಂಭ ಮಾಡಿದ್ದಾರೆ. ಲಕ್ಷಾಂತರ ಜನರಿಗೆ ಪ್ರೇರಣೆ ನೀಡಿದ ಅನಂತಕುಮಾರರ ಜೀವನಯಾತ್ರೆಯನ್ನು ಬಿಂಬಿಸುವ ಅನಂತ ಪ್ರೇರಣಾ ಕೇಂದ್ರವೂ ಲಕ್ಷಾಂತರ ಜನರಿಗೆ ಪ್ರೇರಣೆ ನೀಡುವಂತಾಗಲಿ. ಅನಂತಕುಮಾರ್ ಮತ್ತೆ ಹುಟ್ಟಿ ಬರಲಿ.

ಪುಟ 1 ರಿಂದ

# ಅನಂತ ವಿಶ್ವರೂಪ ದರ್ಶನ

ಅವರೇ ಜತನದಿಂದ ಕಾಪಾಡಬೇಕು. ತಮ್ಮ ಬದುಕನ್ನು ಜತನದಿಂದ ಕಾಪಾಡಬಲ್ಲರು ಎಂಬ ವಿಶ್ವಾಸದಿಂದ ಅನಂತಕುಮಾರರು ಆ ವಾರಸಿಕೆಯನ್ನು ತೇಜಸ್ವಿನಿಯವರಿಗೆ ಕೊಟ್ಟು ಹೋಗಿದ್ದಾರೆ. ಜೀವನದಲ್ಲಿ ಯಾರ ಮೇಲೆ ಅಪಾರ ನಂಬಿಕೆ ಇಟ್ಟುಕೊಂಡಿದ್ದರೋ, ಜೀವನದ ಭರವಸೆಯ ಸೂತ್ರವೂ ಸರ್ವಸ್ವವೂ ಆಗಿರುವ ಆ ತೇಜಸ್ವಿನಿಯವರಿಗೆ ಈ ವಾರಸಿಕೆಯನ್ನು ದಾಟಿಸಿ ಹೋಗಿದ್ದಾರೆ. ಅವರಿಂದ ಇವರು; ಇವರಿಂದ ಅವರು. ತೇಜಸ್ವಿನಿಯವರು ಅನಂತಕುಮಾರ್ ನೀಡಿರುವ ವಾರಸಿಕೆಯನ್ನು ಜತನದಿಂದ ಕಾಪಾಡಿಕೊಂಡು ಬಂದಿದ್ದಾರೆ, ಅದು ಎಲ್ಲರಿಗೂ ಸಿಗಬೇಕು ಎಂಬ ಉದ್ದೇಶದಿಂದ ಅವರು ಕೆಲಸ ಮಾಡುತ್ತಿದ್ದಾರೆ. ಅದನ್ನು ನೋಡಲೆಂದೇ ನಾನು ನನ್ನ ಎಲ್ಲ ಕಾರ್ಯಕ್ರಮಗಳನ್ನು ಬದಿಗಿಟ್ಟು ಅನಂತ ಪ್ರೇರಣಾ ಕೇಂದ್ರದ ಪ್ರಾರಂಭೋತ್ಸವದಲ್ಲಿ ಭಾಗವಹಿಸಿದ್ದೇನೆ.

ಇಲ್ಲಿ ಅನಂತ ಪ್ರೇರಣಾ ಕೇಂದ್ರದಲ್ಲಿ ಅನಂತನ ವಿಶ್ವರೂಪ ದರ್ಶನವಾದಂತಾಯಿತು. ತನ್ನ ಕರ್ತವ್ಯವನ್ನು ಮರೆತ ಅರ್ಜುನನಿಗೆ ಕೃಷ್ಣ ತಿಳುವಳಿಕೆ ಮೂಡಿಸಲು ಯತ್ನಿಸಿದ, ಅವನನ್ನು ಒಪ್ಪಿಸುವ ಪ್ರಯತ್ನ ಮಾಡಿದ. ಎಲ್ಲವನ್ನೂ ಕೇಳಿಸಿಕೊಂಡ ಮೇಲೂ ಅರ್ಜುನನಿಗೆ ಯುದ್ಧ ಮಾಡುವುದು ಧರ್ಮವೋ ಅಧರ್ಮವೋ ಎಂಬ ಸಂಶಯ ದೂರವಾಗಲಿಲ್ಲ. ಆಗ, ಕೇವಲ ಬೌದ್ಧಿಕವಾಗಿ ಹೇಳುವುದರಿಂದ ಪ್ರಯೋಜನವಿಲ್ಲ, ಹೇಳುತ್ತಿರುವವರು ಯಾರು ಎಂಬುದು ಅವನಿಗೆ ಕಾಣಿಸಬೇಕು ಎಂದು ಭಾವಿಸಿದ ಕೃಷ್ಣ ಅರ್ಜುನನಿಗೆ ವಿಶ್ವರೂಪದ ದರ್ಶನ ಮಾಡಿಸಿದ. ಆಗ ಅರ್ಜುನನಿಗೆ ಎಲ್ಲ ಸಂದೇಹಗಳು ನಿವಾರಣೆಯಾಗಿ, ಕರ್ತವ್ಯದ ನೆನಪಾಯಿತು. ಆ ಸಮಯದಲ್ಲಿ ಅರ್ಜುನ, ‘ಕರಿಷ್ಯೇ ವಚನಂ ತವ’ ಎಂದು ಹೇಳುತ್ತಾನೆ. ಅರ್ಜುನನ ಮೂಲಕ ಯುದ್ಧ ಮಾಡಿಸುವುದು ರಾಜ್ಯಭೋಗವನ್ನು ಅವನು ಅನುಭವಿಸಲಿ ಎಂದಲ್ಲ. ಅವನ ಮುಖಾಂತರ ಧರ್ಮಸಂರಕ್ಷಣೆ ಕಾರ್ಯ ನಡೆಯಬೇಕೆಂದು ಕೃಷ್ಣನ ಉದ್ದೇಶ. ರಾಜ್ಯವಾಳುವುದು ನಿಮಿತ್ತ ಮಾತ್ರ, ಧರ್ಮರಕ್ಷಣೆ ನಿಜವಾದ ಗುರಿ. ಆ ಧರ್ಮರಕ್ಷಣೆ ಮಾಡುವ ಕಾರ್ಯಸಂಕಲ್ಪ ಶಿಥಿಲವಾಗಬಾರದು, ಸಡಿಲವಾಗಬಾರದು. ಸಂಕಲ್ಪ ಸಿದ್ಧಿಯಾಗಬೇಕು. ಅದಕ್ಕಾಗಿ ಕೃಷ್ಣ ಅರ್ಜುನನಿಗೆ ಭಗವದ್ಗೀತೆಯನ್ನು ಬೋಧಿಸಿದ. ಅದರೂ ಅವನ ಮನಸ್ಸಿಗೆ ಸಂಪೂರ್ಣ ಸಮಾಧಾನವಾಗದಿದ್ದಾಗ ವಿಶ್ವರೂಪ ದರ್ಶನದ ಕೊನೆಯ ಅಸ್ತ್ರವನ್ನು ಬಳಸಿದ. ಅರ್ಜುನನ ಅಪೇಕ್ಷೆಯಂತೆ ಕೃಷ್ಣ ಅದನ್ನು ನೆರವೇರಿಸಿದ್ದು ಎಲ್ಲರಿಗೂ ತಿಳಿದಿರುವ ವಿಷಯ.

ಈ ಅನಂತ ಪ್ರೇರಣಾ ಕೇಂದ್ರದಲ್ಲಿ ಅನಂತನನ್ನು ನೋಡಿದಾಗ ಅವರು ಯಾವ ರೀತಿ ತಮ್ಮ ಜೀವನವನ್ನು ನಡೆಸಿದರು, ಬೆಳೆಸಿಕೊಂಡರು, ಜೀವನದಲ್ಲಿ ಕರ್ತೃತ್ವ, ವ್ಯಕ್ತಿತ್ವ ಮತ್ತು ನೇತೃತ್ವದ ಲಕ್ಷಣಗಳನ್ನು ಅರಳಿಸಿಕೊಂಡರು, ತಮ್ಮನ್ನು ರಾಷ್ಟ್ರದ ಅಡಿದಾವರೆಗಳಲ್ಲಿ ಸಮರ್ಪಣೆ ಮಾಡಿಕೊಂಡರು ಎಂಬ ಅನಂತನ ವಿಶ್ವರೂಪದರ್ಶನ ನಮ್ಮೆಲ್ಲರಿಗೂ ಆಗುತ್ತಿರಬೇಕು. ಮರೆಯುವುದು ನಮ್ಮ ಸ್ವಭಾವ. ಮರೆಯಬಾರದೆಂದರೆ ಯಾರಾದರೂ ನೆನಪು ಮಾಡುತ್ತಿರಬೇಕು. ಈ ಹಿನ್ನೆಲೆಯಲ್ಲಿ ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿರುವ ಅನಂತ ಪ್ರೇರಣಾ ಕೇಂದ್ರಗಳು ತಮ್ಮ ಭೂಮಿಕೆಯನ್ನು ಸದಾ ನಿರ್ವಹಿಸುತ್ತಿರಲಿ ಎಂಬುದು ನನ್ನ ಆಶಯ. ಇಂದಿನ ವಿದ್ಯಾರ್ಥಿಗಳ, ಯುವಕರ, ರಾಜಕಾರಣಿಗಳ, ಮಹತ್ವಾಕಾಂಕ್ಷೆ ಹೊಂದಿರುವ ಎಲ್ಲರ ಬಾಳಿಗೆ ಸರಿಯಾದ ಮಾರ್ಗದರ್ಶನ ನೀಡುವ ಬೆಳಕಾಗಿ ಇದು ಸದಾ ಬೆಳಗುತ್ತಿರಲಿ. ಅನಂತ ವಿಶ್ವರೂಪ ದರ್ಶನವನ್ನು ಸೊಗಸಾಗಿ, ಪರಿಣಾಮಕಾರಿಯಾಗಿ ಮಾಡಿಸುತ್ತಿರುವ ತೇಜಸ್ವಿನಿ ಮತ್ತು ಅವರ ಬಳಗಕ್ಕೆ ಧನ್ಯವಾದ.

ತೇಜಸ್ವಿನಿಯವರೂ ತಮ್ಮ ಸುತ್ತ ದೊಡ್ಡ ಬಳಗವನ್ನು ಕಟ್ಟಿಕೊಂಡು ಅವರೆಲ್ಲರಿಗೂ ಒಂದು ವಾರಸಿಕೆಯನ್ನು ಕಟ್ಟಿ ಕೊಡುತ್ತಿದ್ದಾರೆ. ಇವರ ಕೆಲಸಕ್ಕೆ ಕೈ ಜೋಡಿಸಿ ನಮ್ಮ ಅಳಿಲು ಸೇವೆ ಸಲ್ಲಿಸೋಣ. ರಾಷ್ಟ್ರ ಕಾರ್ಯಕ್ಕೆ, ಧರ್ಮ ಸಂರಕ್ಷಣೆಗೆ ನಮ್ಮಿಂದ ಸಾಧ್ಯವಾದಷ್ಟು ಕೆಲಸ ಮಾಡೋಣ.

ನೆನಪಿನ ಅಂಗಳದಿಂದ

# ಸರಳತೆ ಮೆರೆದ ಉನ್ನತ ವ್ಯಕ್ತಿತ್ವ

**ಡಿ. ಮಹೇಂದ್ರ,** ಪ್ರಾದೇಶಿಕ ನಿರ್ದೇಶಕರು,
ಇಂದಿರಾ ಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ಬೆಂಗಳೂರು

ಅನಂತಕುಮಾರರ ಪರಿಚಯ ನನಗಾಗಿದ್ದು ನಾನು ಹೈಸ್ಕೂಲಿನಲ್ಲಿ 10ನೇ ತರಗತಿಯಲ್ಲಿ ಓದುತ್ತಿದ್ದಾಗ. ಆ ಸಮಯದಲ್ಲಿ ನನ್ನ ದೊಡ್ಡಮ್ಮನ ಮಗ ಕಲಬುರಗಿಯ ವಿದ್ಯಾರ್ಥಿ ಪರಿಷತ್ತಿನ ಜಿಲ್ಲಾ ಪ್ರಮುಖನಾಗಿದ್ದ. ಅವನು ತಮ್ಮ ಸಭೆಯೊಂದಕ್ಕೆ ನನ್ನನ್ನು ಕರೆಕೊಂಡು ಹೋಗಿದ್ದ. ಅದು ಕೊನೆಯ ದಿನವಾಗಿದ್ದರಿಂದ "ಬಂದು ನಾನೇನು ಮಾಡಲಿ" ಎಂದು ನಿರುತ್ಸಾಹ ತೋರಿಸಿದ್ದೆ. "ಆತ ಬೆಂಗಳೂರಿನಿಂದ ಅನಂತಕುಮಾರ್ ಎಂಬ ವ್ಯಕ್ತಿ ಬರುತ್ತಿದ್ದಾರೆ, ಬಹಳ ಚೆನ್ನಾಗಿ ಮಾತನಾಡುತ್ತಾರೆ. ಅವರ ಭಾಷಣವನ್ನು ನೀನು ಕೇಳಬೇಕು" ಎಂದು ನನ್ನನ್ನು ಬಲವಂತದಿಂದ ಕರೆದುಕೊಂಡು ಹೋಗಿದ್ದ. ಸಭಾಂಗಣದ ಕೊನೆಯ ಸಾಲಲ್ಲಿ ಕೊನೆಯವನಾಗಿ ಕುಳಿತು ಅವರ ಸಮಾರೋಪ ಭಾಷಣ ಕೇಳಿ ನೆರೆದಿದ್ದ ಎಲ್ಲರಂತೆ ನಾನೂ ಮಂತ್ರಮುಗ್ಧನಾಗಿದ್ದೆ. ವಿದ್ಯಾರ್ಥಿ ಪರಿಷತ್ತಿನ ಸೈದ್ಧಾಂತಿಕ ಬಹುಮುಖಿ ಕಾರ್ಯಗಳ ಕುರಿತು ಅವರು ಮಾತನಾಡುತ್ತಿದ್ದರು. ವಿದ್ಯಾರ್ಥಿಯೊಬ್ಬ ದೇಶವನ್ನು ಪ್ರಧಾನವಾಗಿರಿಸಿಕೊಂಡು ಯಾವ ರೀತಿ ಆಲೋಚನೆ ಮಾಡಬೇಕು ಎಂಬ ವಿಷಯವನ್ನು ಆಯಾ ಜಿಲ್ಲೆಗೆ ಸಂಬಂಧಿಸಿದ ಭಾಷೆಯಲ್ಲಿಯೇ ಹೇಳುತ್ತಿದ್ದರು. ಇದು ನನ್ನನ್ನು ಸೆಳೆಯಿತು.

ಕಾಲೇಜಿನ ದಿನಗಳಲ್ಲಿ ವಿದ್ಯಾರ್ಥಿ ಪಥ ಎನ್ನುವ ಪತ್ರಿಕೆ ಪ್ರಕಟವಾಗುತ್ತಿತ್ತು. ಅದರ ಅನೇಕ ಲೇಖನಗಳಲ್ಲಿ ಮತ್ತು ಚಿತ್ರಗಳಲ್ಲಿ ಅನಂತಕುಮಾರ್ ಅವರನ್ನು ನೋಡುತ್ತಿದ್ದೆವು. 1992 ರಲ್ಲಿ ನಾನು ಸಂಘದ ವತಿಯಿಂದ ವಿದ್ಯಾರ್ಥಿ ಪರಿಷತ್ತಿನ ಪ್ರಚಾರ ಕಾರ್ಯಕ್ಕಾಗಿ ಹೋದಾಗ ಅನಂತಕುಮಾರ್ ಅವರನ್ನು ಮೊದಲ ಬಾರಿಗೆ ಭೇಟಿಯಾದೆ. ಅವರು ವಿದ್ಯಾರ್ಥಿ ಪರಿಷತ್ತಿನ ಕಚೇರಿಯಲ್ಲಿ ಕುಳಿತಿದ್ದರು. ದೊಡ್ಡ ರಾಜಕಾರಣಿಯೊಬ್ಬರು ಎಷ್ಟು ಸರಳವಾಗಿ ಕುಳಿತಿದ್ದಾರಲ್ಲ ಎಂದು ನನಗೆ ಆಶ್ಚರ್ಯವಾಯಿತು. ನಾನು ಪರಿಚಯ ಮಾಡಿಕೊಳ್ಳಲು ಹೋದಾಗ ಅವರು "ನನಗೆ ನಿನ್ನ ಬಗ್ಗೆ ಗೊತ್ತಿದೆ, ನೀನು ದಯಾಘನ್ ಅವರ ತಮ್ಮ, ನೀನು ಆರ್ಟಿಸ್ಟ್ ಅಲ್ವೇನೋ?" ಎಂದು ಕೇಳಿದರು. ಅವರಿಗೆ ಈ ಮಾಹಿತಿಯೆಲ್ಲ ಎಲ್ಲಿ ದೊರೆಯಿತು ಎಂದು ತಿಳಿಯದಿದ್ದರೂ ವಿದ್ಯಾರ್ಥಿ ಪರಿಷತ್ತಿನಲ್ಲಿ ಕೆಲಸ ಮಾಡುವ ಎಲ್ಲರ ಬಗ್ಗೆ ಸಮಗ್ರ ಮಾಹಿತಿ ಅವರಿಗಿತ್ತು ಎಂದು ತಿಳಿಯಿತು.

ಒಮ್ಮೆ ಅವರು ರ್‍ಯಾಲಿಗೆ ಸಂಬಂಧಪಟ್ಟ ಸಭೆಗಳಿಗಾಗಿ ರಾತ್ರಿ ಸುಮಾರು ಒಂದು ಗಂಟೆಗೆ ಕಾರಲ್ಲಿ ಹೋಗುತ್ತಿದ್ದಾಗ ಗೋಡೆಬರಹದಲ್ಲಿ ನಿರತರಾಗಿದ್ದ ನಮ್ಮ ಬಳಿ ಕಾರು ನಿಲ್ಲಿಸಿ "ಗೋಡೆ ಬರಹ ಮಾಡುವಾಗ ಒಂದು ಸಂಪ್ರದಾಯ ಇರುತ್ತೆ, ಗೊತ್ತೇ ನಿನಗೆ? ಮೊದಲಿಗೆ ಚಹಾ ಕುಡೀಬೇಕಯ್ಯಾ, ಆಮೇಲೆ ಗೋಡೆ ಬರಹ ಶುರು ಮಾಡಬೇಕು" ಎಂದಿದ್ದರು. ಪಕ್ಕದಲ್ಲಿಯೇ ತಳ್ಳುಗಾಡಿಯಲ್ಲಿ ಚಹಾ ದೊರೆಯುತ್ತಿತ್ತು. ರಾಷ್ಟ್ರಮಟ್ಟದಲ್ಲಿ ಅದಾಗಲೇ ಗುರುತಿಸಿಕೊಂಡ ರಾಜಕಾರಣಿಯಾಗಿದ್ದ ಅನಂತಕುಮಾರರು ನಮ್ಮ ಜೊತೆ ನಿಂತು ತಳ್ಳುಗಾಡಿಯ ಚಹಾ ಸ್ವೀಕರಿಸಿದರು. ಎಂತಹ ಉನ್ನತ ಸ್ಥಾನದಲ್ಲಿದ್ದರೂ ಕಾರ್ಯಕರ್ತರ ಜೊತೆಗೆ ಸರಳವಾಗಿ ಬೆರೆಯುವ ಅವರ ಗುಣಕ್ಕೆ ನಾನು ಮಾರುಹೋಗಿದ್ದೆ.

ಅವರು ಮೊದಲ ಬಾರಿಗೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದಾಗ ಆಡುಗೋಡಿ ಭಾಗದಲ್ಲಿ ಪ್ರಚಾರಕ್ಕೆ ಬಂದಿದ್ದರು. ನಾವು ಸುಮಾರು ಹದಿನೈದು ಇಪ್ಪತ್ತು ಜನರು ಅನಂತಕುಮಾರರ ಜೊತೆ ಪ್ರಚಾರಕ್ಕೆ ಹೋಗುತ್ತಿದ್ದೆವು. ಆಗ ಆಡುಗೋಡಿಯ ಸ್ಲಂ ಒಂದರಲ್ಲಿ ಮುಖ್ಯಸ್ಥೆಯಾಗಿದ್ದ ದೊಡ್ಡಜ್ಜಿ ಎಂಬವರನ್ನು ಭೇಟಿಯಾಗಲು ನಮ್ಮನ್ನು ಕರೆದುಕೊಂಡು ಹೋದರು. ಅವರ ಬಳಿ ಹೋದಾಗ ಅನಂತಕುಮಾರ್ ಬಾಗಿ ನಮಸ್ಕರಿಸಿದರು. ದೊಡ್ಡಜ್ಜಿ ತನ್ನ ಎರಡೂ ಕೈಗಳನ್ನೆತ್ತಿ ಆಶೀರ್ವಾದ ಮಾಡಿದರು. ಅಲ್ಲಿಂದ ಸ್ವಲ್ಪ ದೂರ ಬಂದಮೇಲೆ ನಾನು ಅನಂತಕುಮಾರ್ ಅವರನ್ನು "ಅಜ್ಜಿ ದೊಡ್ಡವರು, ಸ್ಲಂ ಮುಖ್ಯಸ್ಥರು ಎಂದ ಮೇಲೆ ನೀವು ಅವರ ಕಾಲು ಮುಟ್ಟಿ ನಮಸ್ಕಾರ ಮಾಡಬಹುದಿತ್ತಲ್ಲ?" ಎಂದು ಕೇಳಿದೆ. ಅದಕ್ಕೆ ಅವರು "ಇಷ್ಟೊಂದು ನಾಟಕೀಯತೆ ಬೇಡ, ನಾವು ಸಹಜವಾಗಿಯೇ ಮತ ಕೇಳೋಣ" ಎಂದರು. ಅಂದು ಅವರು ಕಾಲು ಮುಟ್ಟಿ ನಮಸ್ಕಾರ ಮಾಡಿದ್ದರೆ ಪತ್ರಿಕೆಯಲ್ಲಿ ದೊಡ್ಡ ಸುದ್ದಿಯಾಗುತ್ತಿತ್ತು. ಓಟಿಗಾಗಿ ಅವರು ತಮ್ಮ ನಿಲುವುಗಳೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ. ಓಟಿಗಾಗಿ ನಾಟಕ ಮಾಡದೆ, ತಮ್ಮ ಸಹಜ ಸ್ವಭಾವದ ನೆಲೆಯಲ್ಲಿಯೇ ಪ್ರಚಾರ ಮಾಡಿದರು. ಅವರಿಗೆ ತಮ್ಮ ದಾರಿ ಸ್ಪಷ್ಟವಾಗಿತ್ತು. ಇತರರಿಗಿಂತ ತಾನು ಭಿನ್ನ ಎಂಬುದನ್ನು ಅವರು ಪ್ರಾರಂಭದಲ್ಲಿಯೇ ತೋರಿಸಿ ಕೊಟ್ಟಿದ್ದರು.

ಒಮ್ಮೆ ದೆಹಲಿಯಲ್ಲಿ ಅವರ ಮನೆಗೆ ನಾನು, ನನ್ನ ಮಗ ಮತ್ತು ಶ್ರೀಮತಿಯ ಜೊತೆ ಹೋಗಿದ್ದಾಗ ಎಂದಿಗೂ ಮರೆಯಲಾಗದ ಘಟನೆಯೊಂದು ನಡೆಯಿತು. ನಮ್ಮ ಜೊತೆ ಬಂದಿದ್ದವರೆಲ್ಲ ಹೊರಟು ಹೋಗಿದ್ದರು. ನಾವು ಸಂಜೆಯ ರೈಲಿನಲ್ಲಿ ಪ್ರಯಾಣಿಸಬೇಕಾಗಿತ್ತು. ಸುಮಾರು ನಾಲ್ಕು ಗಂಟೆಗೆ ಅನಂತಕುಮಾರ್ ಕಚೇರಿ ಕೆಲಸದಿಂದ ಬಂದವರೇ ನನ್ನ ಪ್ರಯಾಣದ ಬಗ್ಗೆ ವಿಚಾರಿಸಿಕೊಂಡರು. ಅಷ್ಟಕ್ಕೆ ಸುಮ್ಮನಾಗದೆ, ತಮ್ಮ ಅಡುಗೆಯವರನ್ನು ಕರೆದು "ಇವರು ತಮ್ಮ ಶ್ರೀಮತಿ ಮತ್ತು ಚಿಕ್ಕ ಮಗುವಿನ ಜೊತೆ ಎರಡು ದಿನ ಪ್ರಯಾಣ ಮಾಡಲಿದ್ದಾರೆ, ಅವರಿಗೆ ಎರಡು ದಿನಕ್ಕಾಗುವಷ್ಟು ಊಟಕ್ಕೆ ವ್ಯವಸ್ಥೆ ಮಾಡಿ ಪ್ಯಾಕ್ ಮಾಡಿ ಕೊಡಿ" ಎಂದು ಸೂಚಿಸಿದರು. ಮೂರುನಾಲ್ಕು ಖಾತೆಗಳನ್ನು ನಿಭಾಯಿಸುವ ಕೇಂದ್ರ ಸಚಿವರು ತಮ್ಮ ಎಲ್ಲ ಒತ್ತಡಗಳ ನಡುವೆಯೂ ನಮ್ಮ ಬಗ್ಗೆ ಅಷ್ಟು ಕಾಳಜಿ ವಹಿಸಿದ್ದರು ಎಂಬ ವಿಚಾರ ಅವರ ಅತಿಥಿಸತ್ಕಾರಕ್ಕೊಂದು ನಿದರ್ಶನ.

ಕಳೆದ ವಿಧಾನ ಸಭೆ ಚುನಾವಣೆಯ ಸಂದರ್ಭದಲ್ಲಿ ಒಂದು ಲೋಗೋ ವಿನ್ಯಾಸ ಮಾಡಿಕೊಡುವಂತೆ ಅವರು ನನಗೆ ಸೂಚಿಸಿದ್ದರು. ಅವರ ಸೂಚನೆಯ ಮೇರೆಗೆ ಸಿದ್ಧಪಡಿಸಿದ ಲೋಗೋವನ್ನು ನಾನು ಪಕ್ಷದ ಸಮಿತಿಯ ಮುಂದಿರಿಸಿದೆ. ಎಲ್ಲರೂ ಚೆನ್ನಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಆದರೆ ಯಡಿಯೂರಪ್ಪನವರು ಮಾತ್ರ "ಅನಂತಕುಮಾರರನ್ನೊಮ್ಮೆ ಕೇಳೋಣ, ಇರಿ" ಎಂದರು. ಲೋಗೋವನ್ನು ನೋಡಿದ ಅನಂತಕುಮಾರರು ಕೂಡಲೇ "ಏ ಇದರಲ್ಲಿ ಕನ್ನಡದ ಧ್ವಜ ಹಾಕು, ಹಳದಿ ಮತ್ತು ಕೆಂಪು ಬಣ್ಣ ಬರಬೇಕಲ್ವ" ಎಂದರು. ಕನ್ನಡ ಬಾವುಟದ ಬಣ್ಣ ಹಾಕುವ ಬದಲು ನಾನು ಬೇರೆ ಬಣ್ಣ ಹಾಕಿದ್ದೆ. ಇಂತಹ ಸೂಕ್ಷ್ಮ ವಿಚಾರವನ್ನೂ ಅನಂತಕುಮಾರ್ ಗಮನಿಸಿದ್ದರು. ಯಡಿಯೂರಪ್ಪನವರೂ ಕೂಡ ಪರಿಪೂರ್ಣತೆಯ ವಿಚಾರದಲ್ಲಿ ಅನಂತಕುಮಾರರ ಕಡೆ ನೋಡುತ್ತಿದ್ದರು. ಅವರಿಬ್ಬರ ನಡುವೆ ಆ ಮಟ್ಟದ ಹೊಂದಾಣಿಕೆಯಿತ್ತು.

ಒಮ್ಮೆ ಕವಿಗೋಷ್ಠಿಯೊಂದಕ್ಕೆ ಅವರನ್ನು ನಾವು ಆಹ್ವಾನಿಸಿದ್ದೆವು. ಅವರು ದೊಡ್ಡ ರಾಜಕಾರಣಿ, ಬರುತ್ತಾರೋ ಇಲ್ಲವೋ ಎಂಬ ಅನುಮಾನ ನಮಗಿತ್ತು. ಸಂಘಟಕರಿಗೆಲ್ಲ ಆಶ್ಚರ್ಯವಾಗುವಂತೆ ಅವರು ತಮ್ಮ ಶ್ರೀಮತಿಯವರೊಂದಿಗೆ ಬಂದುದಲ್ಲದೆ ಒಂದು ಕವಿತೆಯನ್ನೂ ವಾಚಿಸಿದರು. ಕಾರ್ಯಕ್ರಮದ ಕೊನೆಯವರೆಗೂ ಕುಳಿತಿದ್ದು ಸಾಹಿತಿಗಳೊಡನೆ ಮಾತುಕತೆ ನಡೆಸಿದ್ದರು.

ಸಂಘಟನಾತ್ಮಕವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಅನಂತಕುಮಾರ್ ಎಲ್ಲರಿಗೂ ಮಾದರಿಯಾಗಿದ್ದಾರೆ. ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ ಮತ್ತು ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ಸ್ ಅನಂತಕುಮಾರರ ಕೊಡುಗೆಗಳು. ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರನ್ನು ಸೂಚಿಸಿದವರು ಅವರೇ. ಅವರು ನಮ್ಮ ನಡುವೆ ಇದ್ದಿದ್ದರೆ ಗಡಿವಿವಾದಗಳಿಗೆ, ಆರ್ಯ ಮತ್ತು ದ್ರಾವಿಡ ಪರಿಕಲ್ಪನೆಗಳಿಗೆ ಅಂತ್ಯ ಹಾಡುತ್ತಿದ್ದರು. ಇವತ್ತು ಅವರಿಲ್ಲದಿದ್ದರೂ ಎಲ್ಲರಿಗೂ ಮಾದರಿಯಾಗುವ ತತ್ವ ಸಿದ್ಧಾಂತಗಳನ್ನು ಬಿಟ್ಟು ಹೋಗಿದ್ದಾರೆ. ಅವುಗಳ ಮುಖಾಂತರ ಅನಂತಕುಮಾರರನ್ನು ಮತ್ತೆ ಮತ್ತೆ ನೆನಪು ಮಾಡಿಕೊಳ್ಳೋಣ.




**ಅನಂತ ಪಥ ಮಾಸ ಪತ್ರಿಕೆಯ 32 ನೇ ಸಂಚಿಕೆಯನ್ನು ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಪ್ರಾದೇಶಿಕ ನಿರ್ದೇಶಕರಾದ ಶ್ರೀ ಡಿ. ಮಹೇಂದ್ರ ಅವರು 22-02-2023 ರಂದು ಬಿಡುಗಡೆ ಮಾಡಿದರು.**

ಸಸ್ಯಲೋಕ ಪರಿಚಯ ಮಾಲಿಕೆ- 18

# ಶಂಖಪುಷ್ಪ



ಫೆಬೇಸಿಯಾ ಸಸ್ಯ ಕುಟುಂಬಕ್ಕೆ ಸೇರಿದ ಈ ಗಿಡದ ವೈಜ್ಞಾನಿಕ ಹೆಸರು - ಕ್ಲಿಟೋರಿಯಾ ಟರ್ನಟಿಯಾ ಸಹಜವಾಗಿ ಬೆಳೆಯುವ ಈ ಹೂವಿನ ಗಿಡಕ್ಕೆ ಕಿರಗುನ್ನಿ, ಕಂಠಿಸೊಪ್ಪು, ಕವಡೆ ಹೂವುಗಳ ಗಿಡ ಎಂದೂ ಕರೆಯುತ್ತಾರೆ. ಈ ಸಸ್ಯವು ಏಷ್ಯಾ ಮೂಲದ್ದಾದರೂ ಈಗ ಜಗತ್ತಿನ ಎಲ್ಲ ಖಂಡಗಳಲ್ಲಿಯೂ ಕಾಣಸಿಗುತ್ತದೆ.

ಹೂವಿನ ದಳಗಳು ಶಂಖದ ಆಕಾರವನ್ನು ಹೊಂದಿರುವ ಕಾರಣದಿಂದ ಶಂಖಪುಷ್ಪ ಎಂದು ಕರೆಯಲಾಗುವ ಈ ಸಸ್ಯವು ಬೇಲಿಗಳ ಮೇಲೆ ಬಳ್ಳಿಯಂತೆ ಹಬ್ಬಿ ಬೆಳೆಯುತ್ತದೆ. ಇದರಲ್ಲಿ ಬಿಳಿ, ಕಡುನೀಲಿ, ನಸುನೀಲಿ, ತಿಳಿನೇರಳೆ ಮುಂತಾದ ಹಲವು ಬಣ್ಣಗಳ ಹೂವುಗಳ ಪ್ರಭೇದಗಳನ್ನು ಕಾಣಬಹುದು. ಜೊತೆಗೆ ಒಂದು ಎಸಳಿನ ಮತ್ತು ಎರಡು ಎಸಳುಗಳ ಹೂವುಗಳನ್ನೂ ನೋಡಬಹುದು. ಒಂದೆಸಳಿನ ಹೂವಿನ ತಳದಲ್ಲಿ ಎರಡು ಚಿಕ್ಕ ಎಸಳುಗಳಿರುತ್ತವೆ. ಎರಡೆಸಳಿನ ಹೂವುಗಳ ತಳದಲ್ಲಿ ಒಂದಕ್ಕೊಂದು ಸುರುಳಿಸುತ್ತಿರುವ ಐದು ಪುಟ್ಟ ಎಸಳುಗಳನ್ನು ನೋಡಬಹುದು.

ಎಂತಹ ಪಾಳುಭೂಮಿಯಲ್ಲಿಯೂ ಈ ಸಸ್ಯ ಬೆಳೆಯುತ್ತದೆ. ಹತ್ತರಿಂದ ಹನ್ನೆರಡು ಅಡಿಗಳಷ್ಟು ಉದ್ದ ಬೆಳೆಯುವ ರಸ್ತೆ ಬದಿಗಳಲ್ಲಿ, ಬೇಲಿಗಳ ಮೇಲೆ, ಕಿರುಕಾಡುಗಳಲ್ಲಿ ಯಥೇಚ್ಛವಾಗಿ ಶಂಖಪುಷ್ಪದ ಬಳ್ಳಿಗಳು ಹಬ್ಬಿಕೊಂಡಿರುವುದನ್ನು ಕಾಣಬಹುದು.

**ಗಿಡದ ಕೃಷಿ:** ಶಂಖಪುಷ್ಪ ಗಿಡವು ಸಹಜವಾಗಿ ಬೆಳೆಯುವ ಸಸ್ಯ, ಇದಕ್ಕೆ ಯಾವುದೇ ಕೃಷಿಯ ಯಾವುದೇ ಉಪಚಾರ ಬೇಕಿಲ್ಲ. ಪುಟ್ಟ ಅವರೆಕಾಯಿಯಂತಿರುವ ಕೋಡುಗಳಲ್ಲಿ ನಾಲ್ಕಾರು ಬೀಜಗಳಿರುತ್ತವೆ. ಗಿಡದಲ್ಲಿಯೇ ಕೋಡುಗಳು ಒಣಗಿದ ನಂತರ ಸಿಡಿದು ಬೀಜ ಪ್ರಸಾರವಾಗುತ್ತದೆ, ಬೀಜಗಳು ಬಿದ್ದಲ್ಲಿಯೇ ಹೊಸ ಗಿಡಗಳು ಹುಟ್ಟಿಕೊಳ್ಳುತ್ತವೆ. ತೇವಾಂಶ ಭರಿತ ಮಣ್ಣು ಸಿಕ್ಕರೆ ಸಾಕು, ಬರಡು ನೆಲದಲ್ಲಿಯೂ ಹುಲುಸಾಗಿ ಬೆಳೆಯುತ್ತದೆ.

**ಉಪಯೋಗಗಳು:** ಗಣಿಗಾರಿಕೆಯ ನಂತರ ಬರಡಾದ ನೆಲದಲ್ಲಿ ಮತ್ತೆ ಹಸಿರು ಹಬ್ಬಿಸಲು ಶಂಖಪುಷ್ಪ ಬಹಳ ಸಹಕಾರಿ. ಬಟ್ಟೆಗಳಿಗೆ ಹಾಕುವ ನೈಸರ್ಗಿಕ ಬಣ್ಣದ ತಯಾರಿಕೆಯಲ್ಲಿಯೂ ಶಂಖಪುಷ್ಪವನ್ನು ಬಳಸುತ್ತಾರೆ. ಈ ಹೂವುಗಳನ್ನು ದೇವರ ಪೂಜೆಗೆ ಬಳಸಲಾಗುತ್ತದೆ. ಅಡುಗೆಮನೆಯಲ್ಲಿ ಇದಕ್ಕೆ ಸ್ಥಾನವಿಲ್ಲದಿದ್ದರೂ ಔಷಧೀಯವಾಗಿ ಆಯುರ್ವೇದ, ಯುನಾನಿ, ಸಿದ್ಧ, ನಾಟಿ ವೈದ್ಯ ಮುಂತಾದ ಎಲ್ಲ ವೈದ್ಯಪದ್ಧತಿಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ.

1) ನೀಲಿ ಶಂಖಪುಷ್ಪ ಹೂವುಗಳನ್ನು ನೆರಳಲ್ಲಿ ಒಣಗಿಸಿ, ನೀರಿನಲ್ಲಿ ಚೆನ್ನಾಗಿ ಕುದಿಸಿದ ಒಂದು ಲೋಟ ಬಿಸಿನೀರಿನಲ್ಲಿ ಐದಾರು ಹೂವುಗಳನ್ನು 30 ನಿಮಿಷ ನೆನೆಸಿಡಿ. ನೀರೆಲ್ಲಾ ನೀಲಿ ಬಣ್ಣಕ್ಕೆ ತಿರುಗಿದ ಮೇಲೆ ಮೇಲೆ ಸೋಸಿಕೊಂಡು ಅದಕ್ಕೆ 1/2 ಚಮಚ ನಿಂಬೆರಸ, 1 ಚಮಚ ಜೇನುತುಪ್ಪ ಕಲಸಿ ಕುಡಿಯಿರಿ. ಮೆದುಳಿಗೆ ರಕ್ತ ಸಂಚಾರ ಸುಗಮವಾಗುತ್ತದೆ. ನರಗಳ ಶಕ್ತಿ ಹೆಚ್ಚಿ ಮೆದುಳಿನ ಆರೋಗ್ಯ ಹೆಚ್ಚುತ್ತದೆ, ಜ್ಞಾಪಕ ಶಕ್ತಿ ಹೆಚ್ಚುತ್ತದೆ. 2) ಹೂವಿನ ರಸವನ್ನು ಚೆನ್ನಾಗಿ ಶೋಧಿಸಿ ದಿನಕ್ಕೆರಡು ಬಾರಿ ಒಂದೆರಡು ತೊಟ್ಟುಗಳನ್ನು ಕಣ್ಣಿಗೆ ಬಿಡುವುದರಿಂದ ಕಣ್ಣಿನ ಉರಿ ಕಡಿಮೆಯಾಗುತ್ತದೆ. 3) ಹೆಣ್ಣು ಮಕ್ಕಳ ಆರೋಗ್ಯ ಸಮಸ್ಯೆಗಳಲ್ಲಿ ಈ ಹೂವನ್ನು ಔಷಧಿಯಾಗಿ ಬಳಸುತ್ತಾರೆ. 4) ಅರೆತಲೆನೋವು ನಿವಾರಿಸಲು ಶಂಖಪುಷ್ಪದ ಬೇರನ್ನು ತೇದು ಬಳಸುತ್ತಾರೆ. 5) ಎಲೆಗಳ ರಸವನ್ನು ಬಿಸಿ ಮಾಡಿ ಲೇಪಿಸಿದರೆ ಬಾವು ನೋವು ಗುಣವಾಗುತ್ತದೆ. 6) ಬೇರಿನ ರಸವನ್ನು ಹಾಲಿನಲ್ಲಿ ಬೆರೆಸಿ ಶ್ವಾಸನಾಳಗಳ ತೊಂದರೆಗಳ ನಿವಾರಣೆಗೆ ಬಳಸುತ್ತಾರೆ. 7) ಮುಖದಲ್ಲಿ ಬಿಳಿಕಲೆಗಳಿದ್ದರೆ ಬೇರನ್ನು ತೇದು ಲೇಪಿಸಬಹುದು. 8) ಬೇರಿನ ತೊಗಟೆಯಿಂದ ತಯಾರಿಸಿದ ಚೂರ್ಣವನ್ನು ಕಷಾಯದಲ್ಲಿ ಜೇನುತುಪ್ಪ ಬೆರೆಸಿ ಸೇವಿಸಿದರೆ ದೇಹಬಾಧೆ ಗುಣವಾಗುತ್ತದೆ. 9) ಬೀಜವನ್ನು ಹುರಿದು ಪುಡಿ ಮಾಡಿ ಉಷ್ಣದ ಗುಳ್ಳೆಗಳ ಮೇಲೆ ಲೇಪಿಸಿದರೆ ಅವು ವಾಸಿಯಾಗುತ್ತವೆ. 10) ಜೀರ್ಣಾಂಗವ್ಯೂಹದ ಸಮಸ್ಯೆಗಳು ಹೊಟ್ಟೆಯುಬ್ಬರ ಮುಂತಾದ ತೊಂದರೆಗಳನ್ನು ಶಂಖಪುಷ್ಪದ ಬಳಕೆಯಿಂದ ನಿವಾರಿಸಬಹುದೆಂದು ಆಯುರ್ವೇದದಲ್ಲಿ ಹೇಳಲಾಗಿದೆ. 11) ತಲೆ ಕೂದಲು ಕಪ್ಪಾಗಿ ದಟ್ಟವಾಗಿ ಬೆಳೆಯಲು ಕೊಬ್ಬರಿಎಣ್ಣೆಯೊಂದಿಗೆ ನೀಲಿ ಶಂಖಪುಷ್ಪ ಹೂ ಮತ್ತು ಅದರ ಬೇರನ್ನು ಭೃಂಗರಾಜ ಸೊಪ್ಪಿನೊಂದಿಗೆ ಬಳಸುತ್ತಾರೆ. 12) ಮಹಿಳೆಯರಿಗೆ ವಿಶೇಷವಾಗಿ ಉಪಯುಕ್ತವಾಗಿರುವ 'ಸಾರಸ್ವತಾರಿಷ್ಟ' ತಯಾರಿಸಲು ಇದರ ಬೇರನ್ನು ಬಳಸುತ್ತಾರೆ.



ಛಾಯಾ ಓಕ್ ಬಾಪಟ್



ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Madhumathi Kumbaluru**
Inputs: **Poornaprajna / Srikanth K / Veena Vittal / Prakash N**
Photographs: **Gopal TS / Chakrapani Kengeri / Internet Sources**
Acknowledgements: **Raghavendra Prasad / Krishna Sampagaonkar / Chaya Bapat**
Sketch: **Rashmi Killedar** Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

ವ್ಯಕ್ತಿ ವಿಶೇಷ ಮಾಲಿಕೆ

# ಆನಂದವನದ ಸಂತ – ಬಾಬಾ ಆಮ್ಟೆ


***"ನಾನು ಆತ್ಮವನ್ನು ಹುಡುಕಿದೆ, ಸಿಗಲಿಲ್ಲ; ನಾನು ದೇವರನ್ನು ಹುಡುಕಿದೆ, ಸಿಗಲಿಲ್ಲ; ನನ್ನ ಒಡಹುಟ್ಟಿದವರನ್ನು ಹುಡುಕಿದೆ, ಸಿಕ್ಕಿದರು; ಅವರಲ್ಲಿ ಮೂವರೂ ಜೊತೆಯಾಗಿದ್ದರು" – ಬಾಬಾ ಆಮ್ಟೆ***

ಭಾರತದ ಇತಿಹಾಸಕ್ಕೆ ಮಹಾರಾಷ್ಟ್ರದ ದೇಶಸ್ಥ ಬ್ರಾಹ್ಮಣರ ಕೊಡುಗೆ ಅಪಾರ. ಶಸ್ತ್ರ ಮತ್ತು ಶಾಸ್ತ್ರಗಳೆರಡಕ್ಕೂ ಸಮಾನ ಮಹತ್ವ ನೀಡಿದ ಇವರು ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ರಾಜಕೀಯದಲ್ಲಿ ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಪ್ರಮುಖ ಪಾತ್ರವಹಿಸುವುದರ ಜೊತೆಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿಯೂ ಗಣನೀಯ ಸೇವೆ ಸಲ್ಲಿಸಿದ್ದಾರೆ. ಇಂತಹ ಕ್ಷಾತ್ರತೇಜಸ್ಸಿನ ದೇಶಸ್ಥ ಬ್ರಾಹ್ಮಣ ಮನೆತನದಲ್ಲಿ 26/12/1914ರಂದು ಜನಿಸಿದ ಮುರಳೀಧರ ದೇವಿದಾಸ ಆಮ್ಟೆ ಸಹಜವಾಗಿಯೇ ಬಂದೂಕುಗಳ ಮೇಲೆ ಆಸಕ್ತಿ ಹೊಂದಿದ್ದರು. ತಮ್ಮ ಹದಿನಾಲ್ಕನೆಯ ವಯಸ್ಸಿಗೆ ಬಂದೂಕು ಪರವಾನಗಿಯನ್ನು ಗಳಿಸಿಕೊಂಡು ಬೇಟೆಯಾಡುವುದರಲ್ಲಿ ನಿಸ್ಸೀಮರಾಗಿದ್ದ ಅವರು ಕ್ರೀಡೆಯಲ್ಲಿಯೂ ಪರಿಣತಿ ಹೊಂದಿದ್ದರು.

ತಂದೆ ದೇವಿದಾಸ ಆಮ್ಟೆ ಮತ್ತು ತಾಯಿ ಲಕ್ಷ್ಮೀಬಾಯಿ ಆಮ್ಟೆ ಕರೆಯುತ್ತಿದ್ದ ಮುದ್ದಿನ ಹೆಸರು 'ಬಾಬಾ' ಮುಂದೆ ಅವರ ಅನ್ವರ್ಥ ನಾಮವಾಯಿತು. ಮಹಾರಾಷ್ಟ್ರದ ಹಿಂಗನ್‌ಘಾಟ್ ನಗರದಲ್ಲಿ ಜನಿಸಿದ ಮುರಳೀಧರ ಆಮ್ಟೆ ಜನ್ಮತಃ ಶ್ರೀಮಂತರು. ತಮ್ಮ ಶ್ರೀಮಂತಿಕೆಯನ್ನೆಲ್ಲ ಕುಷ್ಠರೋಗಿಗಳ ಸೇವೆಯಲ್ಲಿ ವಿನಿಯೋಗಿಸಿ ಅವರ ಪಾಲಿಗೆ ಪವಾಡಪುರುಷ "ಬಾಬಾ" ಆದದ್ದರ ಹಿಂದೆ ಒಂದು ರೋಚಕ ಸಂಗತಿಯಿದೆ.

ಬಾಲ್ಯದಲ್ಲಿಯೇ ಕ್ಷಾತ್ರವೃತ್ತಿಯನ್ನು ರೂಢಿಸಿಕೊಂಡಿದ್ದ ಬಾಬಾ ಆಮ್ಟೆ ಒಮ್ಮೆ ಭಾರತೀಯ ಮಹಿಳೆಯೊಬ್ಬರ ಮಾನ ಕಾಪಾಡಲು ಬ್ರಿಟಿಷರೊಂದಿಗೆ ಹೋರಾಡಿದ್ದರು. ವರೋರಾದಲ್ಲಿ ಜಾಡಮಾಲಿಗಳೆಲ್ಲ ಒಟ್ಟಾಗಿ ಸವಾಲೆಸೆದಾಗ ಅದನ್ನು ಧೈರ್ಯವಾಗಿ ಎದುರಿಸಿದ್ದರು. ಅಂತಹ ಬಾಬಾ ಒಮ್ಮೆ ತುಲಸೀರಾಮ್ ಎಂಬ ಕುಷ್ಠರೋಗಿಯೊಬ್ಬನ ಜರ್ಜರಿತ ದೇಹವನ್ನು ನೋಡಿದಾಗ ನಡುಗಿ ಹೋದರು. ಕುಷ್ಠರೋಗದ ಭಯವನ್ನು ನಿವಾರಿಸಿಕೊಳ್ಳಲು ಅದರ ಬಗ್ಗೆ ಅಧ್ಯಯನ ಮಾಡಲು ತೊಡಗಿದರು. ಕುಷ್ಠರೋಗ ಕಣ್ಣಿಗೆ ಕಾಣಿಸುವಷ್ಟು ಭೀಕರವಲ್ಲ ಎಂದು ಅಧ್ಯಯನದ ಮೂಲಕ ಅರಿತ ಅವರು ಕುಷ್ಠರೋಗದ ಸಾಮಾಜಿಕ ಕಳಂಕವನ್ನು ನಿವಾರಿಸಲು ರೋಗದ ಕುರಿತು ಇರುವ ಭಯ, 'ಮಾನಸಿಕ ಕುಷ್ಠ'ವನ್ನು ನಿವಾರಿಸುವುದು ಆದ್ಯ ಕರ್ತವ್ಯ ಎಂದು ಭಾವಿಸಿದರು. ಈ ಹಿನ್ನೆಲೆಯಲ್ಲಿ ಕುಷ್ಠರೋಗವು ಅತಿ ಸಾಂಕ್ರಾಮಿಕವಲ್ಲ ಎಂದು ಸಾಬೀತು ಪಡಿಸಲು ತಾವೇ ಕುಷ್ಠರೋಗಾಣುಗಳನ್ನು ತಮ್ಮ ದೇಹದೊಳಕ್ಕೆ ಚುಚ್ಚಿಸಿಕೊಂಡರು. ಕೊನೆಗೆ, ಕುಷ್ಠರೋಗಿಗಳ ಆರೈಕೆಯೇ ತಮ್ಮ ಜೀವನದ ಆದ್ಯ ಕರ್ತವ್ಯವೆಂದು ಭಾವಿಸಿ ಕುಷ್ಠರೋಗಿಗಳ ನಡುವೆಯೇ ವಾಸಿಸತೊಡಗಿದರು. ರೋಗಮುಕ್ತರ ಪುನರ್ವಸತಿಗಾಗಿ ಅವರಿಗೆ ವೃತ್ತಿತರಬೇತಿ ನೀಡಲು ತೊಡಗಿದರು. ಅವರಿಗೆ ಉದ್ಯೋಗಾವಕಾಶಕ್ಕಾಗಿ ಕರಕುಶಲವಸ್ತುಗಳ ತಯಾರಿಕೆಯ ಸಣ್ಣಪ್ರಮಾಣದ ಉದ್ಯಮವೊಂದನ್ನು ಸ್ಥಾಪಿಸಿದರು. ಉತ್ಪನ್ನಗಳ ಮಾರಾಟಕ್ಕೂ ಶ್ರಮವಹಿಸಿದರು.

ಬಾಬಾ ಆಮ್ಟೆಯವರಲ್ಲಿ ಈ ಪರಿವರ್ತನೆ ಏಕಾಏಕಿ ನಡೆದದ್ದಲ್ಲ. ಶ್ರೀಮಂತ ತಂದೆಯ ಎಂಟು ಮಕ್ಕಳಲ್ಲಿ ಹಿರಿಯರಾಗಿದ್ದ ಬಾಬಾ ಯಾವ ಮಕ್ಕಳೂ ಆಸೆ ಪಡಬಹುದಾದ ಸಮೃದ್ಧ ಬಾಲ್ಯವನ್ನು ಹೊಂದಿದ್ದರು. ಚಾಲನಾ ಪರವಾನಗಿ ದೊರೆಯುವ ವಯಸ್ಸಿಗೆ ಅವರು ತಮ್ಮದೇ ಆದ ಸಿಂಗರ್ ಸ್ಪೋರ್ಟ್ಸ್ ಕಾರನ್ನು ಹೊಂದಿದ್ದರು. ವಾರ್ಧಾದ ಕಾನೂನು ಕಾಲೇಜಿನಿಂದ ಎಲ್‌ಎಲ್‌ಬಿ ಪದವಿ ಗಳಿಸಿದ ಬಾಬಾ ವಕೀಲವೃತ್ತಿಯನ್ನೂ ಪ್ರಾರಂಭಿಸಿದರು. 1942ರ 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಭಾಗವಹಿಸಿ ಬಂಧನಕ್ಕೊಳಗಾದ ಹೋರಾಟಗಾರರ ಪರವಾಗಿ ವಕಾಲತ್ತು ವಹಿಸುವ ಮೂಲಕ ಸ್ವಾತಂತ್ರ್ಯ ಚಳುವಳಿಯ ಸಂಪರ್ಕಕ್ಕೆ ಬಂದರು. ಈ ಸಮಯದಲ್ಲಿ ಶಾಂತಿನಿಕೇತನಕ್ಕೆ ನೀಡಿದ ಭೇಟಿ ಅವರ ಜೀವನದಲ್ಲಿ ಕೆಲವು ಮೂಲಭೂತ ಪರಿವರ್ತನೆಗಳಿಗೆ ಕಾರಣವಾಯಿತು. ಅಂದಿನ ಕಾಲದ ಶ್ರೀಮಂತ ಕುಟುಂಬಗಳಲ್ಲಿದ್ದ ಬಡವರ ಬಗೆಗಿನ ನಿರ್ದಯ ವರ್ತನೆ ಅವರಿಗೆ ಹಿಡಿಸಲಿಲ್ಲ. ಶ್ರೀಮಂತಿಕೆಯ ಲಕ್ಷಣಗಳೇ ಸಾಮಾನ್ಯ ಜನರಿಂದ ತಮ್ಮನ್ನು ಪ್ರತ್ಯೇಕಿಸುತ್ತಿವೆ ಎಂದು ತಿಳಿದು ತಮ್ಮ ಸಾಂಪ್ರದಾಯಿಕ ಉಡುಗೆಯನ್ನು ತ್ಯಜಿಸಿದರು; ಚಂದ್ರಪುರ ಜಿಲ್ಲೆಯ ಜಾಡಮಾಲಿಗಳ, ಚಿಂದಿ ಆಯುವವರ ಜೊತೆ ಅವರ ಉನ್ನತಿಗಾಗಿ ಕೆಲಸ ಮಾಡಲು ಪ್ರಾರಂಭಿಸಿದರು. ಮಹಿಳೆಯೊಬ್ಬಳ ರಕ್ಷಣೆಗಾಗಿ ಬ್ರಿಟಿಷ್ ಸೈನಿಕರ ವಿರುದ್ಧ ಪ್ರತಿಭಟನೆ ನಡೆಸಿದ ವಿಚಾರ ತಿಳಿದು ಗಾಂಧಿಯವರೇ ಬಾಬಾರಿಗೆ 'ಅಭಯ ಸಾಧಕ' ಎಂಬ ಬಿರುದು ನೀಡಿದರು. ಈ ನಡುವೆ ವಾರ್ಧಾದ ಸೇವಾಗ್ರಾಮದಲ್ಲಿಯೂ ಕೆಲಕಾಲ ವಾಸಮಾಡಿದ ಬಾಬಾ ಚರಕಾದಿಂದ ನೂಲುವುದನ್ನು ಕಲಿತರು, ಖಾದಿಯನ್ನು ಬಳಸಲು ಪ್ರಾರಂಭಿಸಿದರು.



ವಕೀಲಿವೃತ್ತಿಯನ್ನು ತೊರೆದ ಬಾಬಾ ಕುಷ್ಠರೋಗಿಗಳ ಶುಶ್ರೂಷೆಯಲ್ಲಿ ತಮ್ಮ ಮುಂದಿನ ಜೀವನವನ್ನು ಕಳೆಯಲು ನಿರ್ಧರಿಸಿದರು. ಇದಕ್ಕೆ ಪೂರ್ವಭಾವಿಯಾಗಿ ಕಲ್ಕತ್ತಾದ ಟ್ರೋಪಿಕಲ್ ಸ್ಕೂಲ್ ಆಫ್ ಮೆಡಿಸಿನ್ ಸಂಸ್ಥೆಯಿಂದ ಕುಷ್ಠರೋಗ ಚಿಕಿತ್ಸೆಯಲ್ಲಿ ತರಬೇತಿ ಪಡೆದರು. ತಮ್ಮ ಊರನ್ನೇ ತೊರೆದು ಚಂದ್ರಪುರ ಜಿಲ್ಲೆಯ ವರೋರಾ ಬಳಿ 'ಆನಂದವನ' ಎಂಬ ಆಶ್ರಮ ಸ್ಥಾಪಿಸಿದರು. ಪತ್ನಿ ಸಾಧನಾ, ಇಬ್ಬರು ಚಿಕ್ಕ ಮಕ್ಕಳು, ಒಂದು ಆಕಳು ಮತ್ತು ಏಳು ಕುಷ್ಠರೋಗಿಗಳೊಂದಿಗೆ ಈ ಗ್ರಾಮಕ್ಕೆ ಬಂದು ನೆಲೆಸಿದ ಅವರು ತಮ್ಮ ಸೇವಾಕಾರ್ಯವನ್ನು ಆರಂಭಿಸಿದರು. ಕುಷ್ಠರೋಗಿಗಳ ಚಿಕಿತ್ಸೆಗಾಗಿ ಹನ್ನೊಂದು "ವಾರದ ಕ್ಲಿನಿಕ್"ಗಳನ್ನು ಪ್ರಾರಂಭಿಸಿ, ಗುಣಮುಖರಾದವರ ಪುನರ್ವಸತಿಗಾಗಿ ಮೂರು ಆಶ್ರಮಗಳನ್ನು ಸ್ಥಾಪಿಸಿದರು. ರೋಗಿಗಳ ಚಿಕಿತ್ಸೆಗೆ ತಾವೇ ಇಳಿದರು. ಅವರ ಪತ್ನಿ ಸಾಧನಾ ಗುಳೇಶಾಸ್ತ್ರಿ ಕೂಡ ಪತಿಯ ಜೊತೆ ಕೈಗೂಡಿಸಿದರು. 1949ರಲ್ಲಿ ಒಂದು ಮರದ ಕೆಳಗೆ ಪ್ರಾರಂಭವಾದ ಆನಂದವನ ಕೇವಲ ಎರಡೇ ವರ್ಷಗಳಲ್ಲಿ 250 ಎಕ್ರೆಗಳಿಗೆ ವಿಸ್ತರಿಸಿತು. ಆಶ್ರಮಕ್ಕೆ ಅಗತ್ಯವಾದ ಹಣ್ಣು, ತರಕಾರಿ ಮತ್ತು ಇತರ ಆಹಾರ ಪದಾರ್ಥಗಳನ್ನು ಆಶ್ರಮದಲ್ಲಿಯೇ ಬೆಳೆಸಲು ಪ್ರಾರಂಭಿಸಿದರು. ಇಂದು, ಈ ಆಶ್ರಮವು ಎರಡು ಸುಸಜ್ಜಿತ ಆಸ್ಪತ್ರೆಗಳು, ಒಂದು ವಿಶ್ವವಿದ್ಯಾಲಯ, ಒಂದು ಅನಾಥಾಲಯ ಮತ್ತು ಒಂದು ಅಂಧ ಮಕ್ಕಳ ಶಾಲೆ, ಒಂದು ಕಿವುಡ, ಮೂಗ ಮಕ್ಕಳ ಶಾಲೆಯನ್ನು ಹೊಂದಿ ಬೃಹದಾಕಾರ ತಾಳಿದೆ. ಇಲ್ಲಿ ಅಂಗವಿಕಲರಿಗೆ, ವಿಶೇಷಚೇತನರಿಗೆ ಮತ್ತು ನಿರಾಶ್ರಿತರಿಗೆ ಆಶ್ರಯ ದೊರೆಯುತ್ತಿದೆ. ಗಾಯಗೊಂಡ ವನ್ಯಪ್ರಾಣಿಗಳಿಗಾಗಿ ಶುಶ್ರೂಷಾ ಕೇಂದ್ರವೂ ಇಲ್ಲಿದೆ. ಇಲ್ಲಿ ವಾಸಿಸುವ ಎಲ್ಲರೂ ಒಂದು ಸಮುದಾಯವಾಗಿ ಕೃಷಿ ಮತ್ತು ಕುಶಲಕಲೆಗಳಲ್ಲಿ ನಿರತರಾಗಿ ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ. ಇಂದು ಆನಂದವನದಲ್ಲೇ ಸುಮಾರು 5000 ನಿವಾಸಿಗಳಿದ್ದಾರೆ.

ಮಹಾರಾಷ್ಟ್ರದ ಗಡ್ಚಿರೋಲಿ ಜಿಲ್ಲೆಯ ಮಾಡಿಯಾ ಗೊಂಡ ಗಿರಿಜನ ಸಮುದಾಯದ ಏಳಿಗೆಗಾಗಿ ಲೋಕ ಬಿರಾದರಿ ಪ್ರಕಲ್ಪವನ್ನು ಬಾಬಾ ಆಮ್ಟೆಯವರು 1973ರಲ್ಲಿ ಪ್ರಾರಂಭಿಸಿದರು. ಭಾರತದ ಏಕತೆಗಾಗಿ 1985ರಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ 3000 ಕಿಲೋಮೀಟರ್ ದೂರದ ಭಾರತ್ ಜೋಡೋ ಕಾಲ್ನಡಿಗೆ ಯಾತ್ರೆ ನಡೆಸಿದರು. ಮೂರು ವರ್ಷಗಳ ನಂತರ ಪೂರ್ವದಿಂದ ಪಶ್ಚಿಮಕ್ಕೆ 1800 ಕಿಲೋಮೀಟರುಗಳ ಕಾಲ್ನಡಿಗೆ ಯಾತ್ರೆಯಲ್ಲಿ ಭಾಗವಹಿಸಿದರು. ನರ್ಮದಾ ಯೋಜನೆಯ ನಿರಾಶ್ರಿತರಿಗೆ ಬೆಂಬಲ ನೀಡುವ ನರ್ಮದಾ ಬಚಾವೋ ಆಂದೋಲನದಲ್ಲಿ ಭಾಗವಹಿಸಲು ನರ್ಮದಾ ನದಿಯ ತಟದಲ್ಲಿ ಸುಮಾರು ಏಳು ವರ್ಷಗಳ ಕಾಲ ವಾಸ ಮಾಡಿದರು.

ಬಾಬಾ ಆಮ್ಟೆಯವರ ಸೇವೆಯನ್ನು ಗುರುತಿಸಿ ಅನೇಕ ಪ್ರಶಸ್ತಿಗಳು ಅವರನ್ನು ಅರಸಿಕೊಂಡು ಬಂದಿವೆ. ವಾಜಪೇಯಿಯವರ ಸರಕಾರದಲ್ಲಿ ಅನಂತಕುಮಾರ್ ಸಂಸ್ಕೃತಿ ಸಚಿವರಾಗಿದ್ದಾಗ ಸರಕಾರವು ಅವರಿಗೆ ಡಾ ಅಂಬೇಡ್ಕರ್ ಅಂತಾರಾಷ್ಟ್ರೀಯ ಪ್ರಶಸ್ತಿ ಮತ್ತು ಗಾಂಧಿ ಶಾಂತಿ ಬಹುಮಾನಗಳನ್ನು ನೀಡಿ ಗೌರವಿಸಿತು. ಇದಲ್ಲದೆ, ಹಲವು ವಿಶ್ವವಿದ್ಯಾಲಯಗಳ ಡಾಕ್ಟರೇಟ್, ಶಾಂತಿನಿಕೇತನದ ದೇಶಿಕೋತ್ತಮ, ಪದ್ಮಶ್ರೀ, ಪದ್ಮವಿಭೂಷಣ ಪ್ರಶಸ್ತಿಗಳು ಅವರಿಗೆ ಲಭಿಸಿವೆ. ಹಲವು ಸಂಘ ಸಂಸ್ಥೆಗಳು, ರಾಜ್ಯಗಳು, ಅವರ ಸೇವೆಯನ್ನು ಗುರುತಿಸಿ ಗೌರವಿಸಿವೆ. ಪ್ರತಿಷ್ಠಿತ ರೇಮನ್ ಮ್ಯಾಗ್ಸೇಸೆ, ಪರ್ಯಾಯ ನೊಬೆಲ್ ಎಂದು ಖ್ಯಾತವಾಗಿರುವ ರೈಟ್ ಲೈವ್ಲಿ ಹುಡ್ ಮುಂತಾದ ಪ್ರಶಸ್ತಿಗಳಿಗೂ ಇವರು ಭಾಜನರಾಗಿದ್ದಾರೆ. ಟೆಂಪಲ್‌ಟನ್ ಬಹುಮಾನ, ಜಮ್ನಾಲಾಲ್ ಬಜಾಜ್ ಪ್ರಶಸ್ತಿ, ಮಾನವ ಹಕ್ಕುಗಳ ವಿಭಾಗದಲ್ಲಿ ವಿಶ್ವಸಂಸ್ಥೆಯ ಪ್ರಶಸ್ತಿ ಬಾಬಾರವರಿಗೆ ದೊರೆತ ಇತರ ಪ್ರತಿಷ್ಠಿತ ಪ್ರಶಸ್ತಿಗಳು.

ಬಾಬಾ ಆಮ್ಟೆಯವರ ಸಾಮಾಜಿಕ ಕಾರ್ಯಗಳನ್ನು ಗಮನಿಸಿ ಮೂಕವಿಸ್ಮಿತರಾದ ದಲಾಯಿಲಾಮಾ ತಾವು ಬಾಬಾರವರ ಅಭಿಮಾನಿ ಎಂದು ಹೇಳಿಕೊಂಡಿದ್ದಾರೆ. ಇಂತಹ ಬಾಬಾ ಫೆಬ್ರವರಿ 9, 2008ರಲ್ಲಿ ತಮ್ಮ 93ನೆಯ ವಯಸ್ಸಿನಲ್ಲಿ ಈ ಲೋಕವನ್ನು ಅಗಲಿದರು.

**-ಕೆ. ಜನಾರ್ದನ ತುಂಗ**





# ಅದಮ್ಯಚೇತನ ತಿಂಗಳ ವರದಿ (15 ಫೆಬ್ರವರಿ 2023 ರಿಂದ 15 ಮಾರ್ಚ್ 2023)

**ಎ- ಚಾಟ್ ನಲ್ಲಿ ಅನಂತ ಕಲೆಗಳ ವೈಭವ:** ಅದಮ್ಯ ಚೇತನ ಮತ್ತು ಅನಂತಕುಮಾರ್ ಪ್ರತಿಷ್ಠಾನಗಳ ಸಹಯೋಗದಲ್ಲಿ ಪ್ರತಿ ತಿಂಗಳ ಕೊನೆಯ ಶನಿವಾರ ಎ-ಚಾಟ್ ಕಾರ್ಯಕ್ರಮವನ್ನು ನಡೆಸಿಕೊಂಡು ಬರಲಾಗುತ್ತಿದೆ. ಭಾರತೀಯ ಕಲೆ, ಸಂಸ್ಕೃತಿ, ಮತ್ತು ಪರಂಪರೆಯನ್ನು ಪ್ರೋತ್ಸಾಹಿಸಿ, ಬೆಳೆಸುವ ನಿಟ್ಟಿನಲ್ಲಿ ಹೊಸ ಮುಖಗಳಿಗೆ ಅವಕಾಶ ಕಲ್ಪಿಸುವುದೂ ಎ-ಚಾಟ್ ಕಾರ್ಯಕ್ರಮದ ಉದ್ದೇಶ.

ಜಯನಗರದ ಸೌತ್‌ಎಂಡ್ ವೃತ್ತದ ವಿಜಯ ವಿದ್ಯಾ ಸಂಸ್ಥೆಯ ಸಭಾಂಗಣದಲ್ಲಿ ಫೆಬ್ರವರಿ ತಿಂಗಳ ಎ-ಚಾಟ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ|| ಪಿ.ವಿ. ಕೃಷ್ಣಭಟ್ ಅವರ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮವು ಶ್ರೀ ತ್ರಿವಿಕ್ರಮ ಜೋಶಿಯವರ ಪ್ರಾರ್ಥನೆಯಿಂದ ಪ್ರಾರಂಭವಾಯಿತು. ಮೈಸೂರು ಬಾನುಲಿಯಲ್ಲಿ ಅದಮ್ಯ ಚೇತನ ಸಂಸ್ಥೆಯಿಂದ ಪ್ರಾಯೋಜಿತವಾಗಿರುವ 'ಶ್ರದ್ಧೆಯ ಶಿಲ್ಪ' ಮಾಲಿಕೆಯಲ್ಲಿ ಪ್ರಸಾರವಾದ ಆನೆ ಕನ್ನಂಬಾಡಿ ದೇವಾಲಯದ ನುಡಿಚಿತ್ರವನ್ನು ಪ್ರದರ್ಶಿಸಲಾಯಿತು. ಯೋಗಗುರು, ಸಹಬಾಳ್ವೆ ಸಂಸ್ಥೆಯ ಅಧ್ಯಕ್ಷ, ಶ್ರೀ ರಾಘವೇಂದ್ರ ಪ್ರಸಾದ್ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಸರಳ ಅಭ್ಯಾಸಗಳನ್ನು ಪರಿಚಯಿಸಿದರು.

ನಂತರ ಪ್ರಸಿದ್ಧ ಸಾಹಿತಿ, ಶ್ರೀ ಡಾ. ಚಿಂತಾಮಣಿ ಕೊಡ್ಲೆಕೆರೆಯವರು ತಮ್ಮ ಕವನಗಳನ್ನು ವಾಚಿಸಿದರೆ, ಗಾಯಕ ಶ್ರೀ ಆರ್. ಶ್ರೀನಿವಾಸ ತಾತಾಚಾರ್ ಆ ಕವನಗಳಿಗೆ ರಾಗ ಸಂಯೋಜನೆ ಮಾಡಿ ಹಾಡುವುದರ ಮೂಲಕ ರಂಜಿಸಿದರು. ಈ "ವಾಚನ – ಗಾಯನ" ಕಾರ್ಯಕ್ರಮದಲ್ಲಿ ಶ್ರೀ ಆದೇಶ್ ಮತ್ತು ಶ್ರೀ ಹರಿಪ್ರಸಾದ್ ಪಕ್ಕವಾದ್ಯದ ಸಹಕಾರ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ, 'ಯಕ್ಷಗಾನ ಗೀತ ಗಾಯನ'ದಲ್ಲಿ ಕುಮಾರಿ ಚಿತ್ಕಲಾ ಕೆ. ತುಂಗ ಅವರು ಯಕ್ಷಗಾನದ ಹಾಡುಗಳನ್ನು ಹಾಡಿದರು. ಇವರ ಭಾಗವತಿಕೆಗೆ ಮದ್ದಳೆಯಲ್ಲಿ ರಾಜೇಶ್ ಆಚಾರ್ಯ ಮತ್ತು ಚಂಡೆಯಲ್ಲಿ ಪನ್ನಗ ಮಯ್ಯ ಸಹಕಾರ ನೀಡಿದರು. ಅನಂತಪಥ ಪತ್ರಿಕೆಯ ಸಂಪಾದಕರಾದ ಶ್ರೀ ಟಿ.ಎಸ್. ಗೋಪಾಲ್, ಸಾಹಿತಿ, ಡಾ. ಚಿಂತಾಮಣಿ ಕೊಡ್ಲೆಕೆರೆ, ಬೆಂಗಳೂರಿನ ಭಾರತೀಯ ದೂರವಾಣಿ ಇಲಾಖೆಯ ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕಿ ಶ್ರೀಮತಿ ವಸುಮತಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ ಈ ಕಾರ್ಯಕ್ರಮ ಸ್ಮರಣೀಯವಾಗಿತ್ತು.

**ಗರ್ಭಕಂಠದ ಕ್ಯಾನ್ಸರ್ (Cervical Cancer) ಬಗ್ಗೆ ಅರಿವಿನ ಉಪನ್ಯಾಸ:** ಈ ತಿಂಗಳ ಶ್ರೀಚೇತನ ಕಾರ್ಯಕ್ರಮದಲ್ಲಿ ಬೆಂಗಳೂರಿನ ಹೆಸರಾಂತ ಪ್ರಸೂತಿ ತಜ್ಞೆ, ಡಾ. ಲತಾ ವೆಂಕಟರಾಮನ್ ಇತ್ತೀಚಿನ ದಿನಗಳಲ್ಲಿ ಮಹಿಳೆಯರನ್ನು ಹೆಚ್ಚಾಗಿ ಬಾಧಿಸುತ್ತಿರುವ ಗರ್ಭಕಂಠ ಕ್ಯಾನ್ಸರ್ ಬಗ್ಗೆ ಮಾಹಿತಿಪೂರ್ಣ ಉಪನ್ಯಾಸ ನೀಡಿದರು. ಗರ್ಭಕಂಠ ಕ್ಯಾನ್ಸರ್ ಲಕ್ಷಣಗಳು, ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಅವರು ವಿವರವಾಗಿ ಮಾತನಾಡಿದರು. ಗರ್ಭಕಂಠದ ಕ್ಯಾನ್ಸರಿನಿಂದ ಬಳಲುತ್ತಿರುವವರ ಸಂಖ್ಯೆಯಲ್ಲಿ ಭಾರತವು ಜಗತ್ತಿನಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ಈ ಕಾಯಿಲೆಯಿಂದ ಅತಿ ಹೆಚ್ಚು ಸಾವು ಸಂಭವಿಸುತ್ತಿದ್ದರೂ ಈ ಕುರಿತು ಭಯ ಪಡಬೇಕಾದ ಅಗತ್ಯವಿಲ್ಲ. ಇಂದು ದೇಶದಲ್ಲಿ ಗರ್ಭಕಂಠ ಕ್ಯಾನ್ಸರ್ ಬಾರದಂತೆ ತಡೆಯಲು ಲಸಿಕೆಯೂ ಲಭ್ಯವಿದೆ. ಈ ಲಸಿಕೆಯನ್ನು 12 ವರ್ಷಕ್ಕೆ ಮೇಲ್ಪಟ್ಟ ಎಲ್ಲಾ ಹೆಣ್ಣು ಮಕ್ಕಳು ತೆಗೆದುಕೊಳ್ಳಬಹುದು. ಜೊತೆಗೆ ಪ್ರತಿ ಐದು ವರ್ಷಗಳಿಗೊಮ್ಮೆಯಾದರೂ ಗರ್ಭಕಂಠದ ಕ್ಯಾನ್ಸರ್ ಬಗ್ಗೆ ಪರೀಕ್ಷೆ ಮಾಡಿಸಿಕೊಳ್ಳುವುದು ಉತ್ತಮ ಎಂದು ಡಾ. ಲತಾ ವೆಂಕಟ್‌ರಾಮ್ ಸಲಹೆ ನೀಡಿದರು. ಶ್ರೀಚೇತನ ಸಭೆಯಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಶ್ರೀಮತಿ ಛಾಯಾ ಓಕ್ ಬಾಪಟ್ ಅವರು ಸಂವಾದದಲ್ಲಿ ಭಾಗವಹಿಸಿದರು. ಡಾ. ಕಾಂಚನ ಹರೀಶ್, ಡಾ. ಶುಭಾ ಬಾದಾಮಿ ಮುಂತಾದ ಅನೇಕ ಗಣ್ಯರು ಹಾಗೂ ಶ್ರೀಚೇತನ ಸಭೆಯ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ದೇಗುಲ ದರ್ಶನ:** ಅದಮ್ಯ ಚೇತನ ಪ್ರಸ್ತುತ ಪಡಿಸುತ್ತಿರುವ 'ದೇಗುಲ ದರ್ಶನ' ತಿಂಗಳ ಕಾರ್ಯಕ್ರಮದಲ್ಲಿ ಈ ಬಾರಿ ಉಡುಪಿ ಜಿಲ್ಲೆಯ ಹಲವು ದೇವಾಲಯಗಳ ಮಾಹಿತಿಯನ್ನು ನೀಡಲಾಯಿತು. ಅದಮ್ಯ ಚೇತನ ಸಂಸ್ಥೆಯು ಪ್ರಾಯೋಜಿಸುತ್ತಿರುವ 'ಶ್ರದ್ಧೆಯ ಶಿಲ್ಪ' ಎಂಬ ಬಾನುಲಿ ಕಾರ್ಯಕ್ರಮ ಸರಣಿಯ ಮೈಸೂರು ಆಕಾಶವಾಣಿಯಿಂದ ಪ್ರತಿ ಮಂಗಳವಾರ ಬೆಳಿಗ್ಗೆ 6.35 ಕ್ಕೆ ಪ್ರಸಾರವಾಗುತ್ತಿದೆ. ಇದರಲ್ಲಿ ನಾಡಿನ ಪುರಾತನ ದೇವಾಲಯಗಳನ್ನು ಪರಿಚಯಿಸಲಾಗುತ್ತಿದೆ.

**ಹಸಿರು ಭಾನುವಾರ:** ಪರಿಸರ ರಕ್ಷಣೆಯ ದೃಷ್ಟಿಯಿಂದ ಅದಮ್ಯ ಚೇತನ, ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅನಂತ ಪ್ರೇರಣಾ ಕೇಂದ್ರದ ವತಿಯಿಂದ ಹಸಿರು ಭಾನುವಾರ ಕಾರ್ಯಕ್ರಮವನ್ನು ಆಯೋಜನೆ ಮಾಡಿಕೊಂಡು ಬರಲಾಗುತ್ತಿದೆ. ಅದರಂತೆ 373, 374, 375 ಮತ್ತು 376ನೇ ಭಾನುವಾರದ ಕಾರ್ಯಕ್ರಮಗಳನ್ನು ಕ್ರಮವಾಗಿ ಸುಬ್ರಮಣ್ಯಪುರ, ವೈಎಎಸ್ ನ್ಯಾಷನಲ್ ಶಾಲಾ ಆವರಣ, ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಜಿಇಎಫ್ ಆವರಣದಲ್ಲಿ, ಗವಿಪುರದ ಅದಮ್ಯ ಚೇತನದ ಸುತ್ತಮುತ್ತ ನಡೆಸಲಾಗಿದ್ದು ಸ್ವಯಂಸೇವಕರು, ಅದಮ್ಯ ಚೇತನದ ಸಿಬ್ಬಂದಿಗಳು ಹಾಗೂ ಬಿಎಂಎಸ್ ಮತ್ತು ನೃಪತುಂಗ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಇತರ ಚಟುವಟಿಕೆಗಳು:** ಅದಮ್ಯ ಚೇತನವು ವಿವಿಧ ಕಡೆ ನಡೆಸಿಕೊಂಡು ಬರುತ್ತಿರುವ ನಿತ್ಯಾನ್ನದಾನ, ಕಾಲೇಜು ವಿದ್ಯಾರ್ಥಿಗಳಿಗೆ ಊಟ, ಪೌರಕಾರ್ಮಿಕರಿಗೆ ತಟ್ಟೆ ವಿತರಣೆ, ಶ್ರೀಸಾಯಿ ಅನ್ನಪೂರ್ಣ ಟ್ರಸ್ಟ್ ಸಹಯೋಗದಲ್ಲಿ ಅದಮ್ಯ ಚೇತನ ಅಡುಗೆ ಮನೆಯಿಂದ ಪ್ರತಿದಿನ 265 ಶಾಲೆಗಳಿಗೆ ಬಿಸಿಯೂಟದ ಜೊತೆಗೆ ಪೌಷ್ಠಿಕಾಂಶಯುಕ್ತ ಹಾಲಿನ ವಿತರಣೆ, ಅದಮ್ಯ ಚೇತನದಲ್ಲಿ ಪ್ರತಿ ಮಂಗಳವಾರ ಶ್ರೀಚೇತನ ಸಭೆ, ಗುರುವಾರ ಭಗವದ್ಗೀತೆ ಪಠಣ ಹಾಗೂ ಅನಂತ ಪ್ರೇರಣಾ ಕೇಂದ್ರದಲ್ಲಿ ಶನಿವಾರ ಪೌಷ್ಟಿಕ, ಸಾತ್ವಿಕ, ಆಹಾರ ಮೇಳ ಮುಂತಾದ ಅನೇಕ ಕಾರ್ಯಕ್ರಮಗಳು ಯಶಸ್ವಿಯಾಗಿ ಮುಂದುವರೆದುಕೊಂಡು ಬಂದಿವೆ.

## ಅಭಿಪ್ರಾಯ

## "ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ವಿಶಿಷ್ಟ ಕಾರ್ಯಕ್ರಮ: ಎ-ಚಾಟ್"

ದಿನಾಂಕ ೨೫/೦೨/೨೦೨೩ರಂದು ವಿಜಯ ಹೈಸ್ಕೂಲ್ ಸಭಾಂಗಣದಲ್ಲಿ ಅನಂತಕುಮಾರ ಪ್ರತಿಷ್ಠಾನ ಆಯೋಜಿಸಿದ್ದ 'ಎ-ಚಾಟ್' ಎಂಬ ಚಿಕ್ಕ, ಚೊಕ್ಕ, ಶಿಸ್ತುಬದ್ಧ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ದೊರೆಯಿತು. ಎರಡು ಗಂಟೆಗಳ ಅವಧಿಯಲ್ಲಿ ವಿವಿಧ ರೀತಿಯ ಕಲಾಪ್ರಕಾರಗಳ ರುಚಿಗಳನ್ನು ಉಣಬಡಿಸಿದ ಸಂತೃಪ್ತ ಭೋಜನದಂತೆನಿಸಿತು. ನಾಡಿನ ವಿಧ ವಿಧ ಕಲೆಗಳಲ್ಲಿ ಪರಿಣತರಾದವರ ಕೌಶಲದ ಅನಾವರಣ ಮಾಡಿಸುವುದರ ಮೂಲಕ ಅದರ ರುಚಿ ನಿಮಗೆ ಹಿಡಿಸಿದರೆ ಆ ಕಲೆಯಲ್ಲಿ ಇನ್ನಷ್ಟು ತೊಡಗಿಕೊಳ್ಳಿ ಎಂದು ಪ್ರೇರಣೆ ಮಾಡುವಂತಿದೆ.

25 ರ ಶನಿವಾರದ ಕಾರ್ಯಕ್ರಮದಲ್ಲಿ ನಾಡಿನ ಪ್ರಾಚೀನ, ಆದರೂ ಜನರಿಗೆ ಅಷ್ಟೇನೂ ಪರಿಚಿತವಲ್ಲದ ಆನೆ ಕನ್ನಂಬಾಡಿ ದೇವಾಲಯದ ಬಹಳಷ್ಟು ವಿಚಾರಗಳನ್ನು ನುಡಿಚಿತ್ರದ ಮುಖಾಂತರ ಪ್ರಸ್ತುತ ಪಡಿಸಿದ್ದು ದೇವಾಲಯವನ್ನು ನಾವೇ ಸ್ವತಃ ಪ್ರವೇಶ ಮಾಡಿ ನೋಡಿದಂತಹ ಅನುಭವದೊಂದಿಗೆ ಖುಷಿಕೊಟ್ಟಿತು. ಭಾರತೀಯ ಯೋಗಾಭ್ಯಾಸ ಕಲೆಯ ಮೂಲಕ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಅತೀ ಸುಲಭವಾದ ವಿಧಾನಗಳನ್ನು ತಿಳಿಸುವ ಪ್ರಾತ್ಯಕ್ಷಿಕೆಯಂತೂ ತುಂಬ ಉಪಯುಕ್ತವಾಗಿತ್ತು. ಪ್ರತಿದಿನ ಕೇವಲ 20 ನಿಮಿಷಗಳಲ್ಲೇ ಮುಗಿಯುವ ಸರಳ ಅಭ್ಯಾಸಗಳು ಈಗಿನ ತರಾತುರಿಯ ಜೀವನ ಶೈಲಿಗೊಂದು ಸುಲಭ ಒಳದಾರಿಯಂತೆ ತೋರಿತು. ಕವಿಯೇ ತನ್ನ ರಚನೆಯನ್ನು ವಾಚಿಸಿದ ತರುವಾಯ ಅವರ ಸಮ್ಮುಖದಲ್ಲೇ ಅವರ ಕವನಗಳನ್ನು ಸುಶ್ರಾವ್ಯವಾಗಿ ಹಾಡುವ ಕಾರ್ಯಕ್ರಮ ಚೆನ್ನಾಗಿ ಮೂಡಿಬಂತು. ಪ್ರಸಿದ್ಧ ಕವಿ, ಚಿಂತಾಮಣಿ ಕೊಡ್ಲೆಕೆರೆಯವರ ಕವನಗಳಿಗೆ ರಾಗ ಸಂಯೋಜನೆ ಮಾಡಿ ಹಾಡಿದವರು ಗಾಯಕ, ಶ್ರೀನಿವಾಸ ತಾತಾಚಾರ್. ಇವರಿಬ್ಬರೂ ದೂರವಾಣಿ ಇಲಾಖೆಯಲ್ಲಿ ಉದ್ಯೋಗಿಗಳಾಗಿದ್ದವರು.

ನಂತರ ನಾಡಿನ ಧೀಮಂತ ಕಲೆ ಯಕ್ಷಗಾನದಲ್ಲಿ ಬಳಸುವ ಹಲವಾರು ವರ್ಷಗಳ ಹಿಂದಿನ ಬೇರೆ ಬೇರೆ ಪ್ರಸಂಗಗಳ, ಬೇರೆ ಬೇರೆ ರಸಾನುಭವದ ಯಕ್ಷ ಸಾಹಿತ್ಯವನ್ನು ಕುಮಾರಿ ಚಿತ್ಕಲಾ ತುಂಗ ಲೀಲಾಜಾಲವಾಗಿ ಹಾಡಿ ಪ್ರೇಕ್ಷಕರ ಮನಗೆದ್ದರು. ಯುವ ಭಾಗವತರು ಇತರ ವಾದ್ಯ ವೃಂದದವರ (ಮದ್ದಲೆ, ಚಂಡೆ ) ಸಹಯೋಗದಲ್ಲಿ ಸುಮಧುರವಾಗಿ ಹಾಡಿ ಆ ಪ್ರಾಚೀನ ಯಕ್ಷ ಕವಿವರ್ಯರೆಲ್ಲ ಇಂದಿಗೂ ಜೀವಂತ ಎಂದು ನಿರೂಪಿಸಿದರು

ಒಟ್ಟಿನಲ್ಲಿ ನೆರೆದ ಸಭಿಕರಿಗೆ ಪ್ರತಿಷ್ಠಾನದ ಈ ನಿರಂತರವಾದ ಕಾರ್ಯಕ್ರಮ ಮುಂದಿನ ದಿನಗಳಲ್ಲಿ ಇನ್ನಷ್ಟು ಸೊಗಸಾಗಿ ಮೂಡಿಬರುವ ಆಶಯವನ್ನು ಬಿಂಬಿಸಿರುವುದಂತೂ ಸತ್ಯ.

**-ಶ್ರೀಮತಿ ವಸುಮತಿ,**
ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕರು
ಭಾರತೀಯ ದೂರ ಸಂಚಾರ ನಿಗಮ, ಬೆಂಗಳೂರು ವಿಭಾಗ

## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )




ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ಸಮಾಜ ಸೇವೆಗಾಗಿ ನ್ಯೂಸ್ 18 ಸುದ್ದಿ ವಾಹಿನಿಯು 2022-23 ಸಾಲಿನ ವರ್ಷದ ಕನ್ನಡಿಗ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.



ಬೆಂಗಳೂರಿನ ಅದಮ್ಯ ಚೇತನದ ಕಾರ್ಯಕರ್ತರು ಅನಂತಕುಮಾರ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪಿ.ವಿ. ಕೃಷ್ಣ ಭಟ್ಟರೊಡನೆ ಹುಬ್ಬಳ್ಳಿಯ ಅದಮ್ಯ ಚೇತನ ಅಡುಗೆಮನೆಗೆ ಭೇಟಿ ನೀಡಿದ ಸಂದರ್ಭ.



ಶ್ರೀಮತಿ ತೇಜಸ್ವಿನಿ ಅನಂತಕುಮಾರರ ಜನ್ಮದಿನದಂದು ಬೆಂಗಳೂರು ದಕ್ಷಿಣ ವಿಭಾಗ ಉಪ ಪೊಲೀಸ್ ಆಯುಕ್ತರಾದ ಪಿ. ಕೃಷ್ಣಕಾಂತ್ ಐ. ಪಿ. ಎಸ್. ಅವರು ಶುಭಕೋರಿದರು.



ಮಾ. 11 ರಂದು ಅನಂತ ಪ್ರೇರಣಾ ಕೇಂದ್ರದಲ್ಲಿ ನಡೆದ ಪೌಷ್ಟಿಕ ಸಾತ್ವಿಕ ಆಂದೋಲನ ಕಾರ್ಯಕ್ರಮದಲ್ಲಿ ಅನೇಕರು ಭಾಗವಹಿಸಿದ್ದರು.




ಮಾರ್ಚ್ 1ರಿಂದ 7ವರೆಗೆ ನಡೆದ ಜನೌಷಧಿ ದಿವಸ -2023 ಹಾಗೂ ಜನ ಔಷಧಿ ಜನ ಚೇತನ ಅಭಿಯಾನಕ್ಕೆ ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.



375ನೇ ಹಸಿರು ಭಾನುವಾರ ಕಾರ್ಯಕ್ರಮ ಹುಬ್ಬಳ್ಳಿಯಲ್ಲಿ ನಡೆಯಿತು.



ರಂಗದೊರೆ ಆಸ್ಪತ್ರೆಯ ಖ್ಯಾತ ಪ್ರಸೂತಿ ತಜ್ಞರಾದ ಡಾ. ಲತಾ ವೆಂಕಟರಾಮನ್ ಅವರು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ಹುಟ್ಟುಹಬ್ಬಕ್ಕೆ ಶುಭಕೋರಿದ ಸಂದರ್ಭ.





ಜಯನಗರದಲ್ಲಿ ನೂತನವಾಗಿ ಪ್ರಾರಂಭಗೊಂಡಿರುವ ಮಾಡೆಲ್ ಎಜುಕೇಷನ್ ಸೊಸೈಟಿಯ ನೂತನ ಕಟ್ಟಡವನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಉದ್ಘಾಟನೆ ಮಾಡಿದರು.

## ಅನಂತ ಚಿತ್ರಸಂಪುಟ

ಅನಂತಕುಮಾರರು ಜಾರ್ಖಂಡ್, ಬಿಹಾರ್, ಮಧ್ಯಪ್ರದೇಶ ರಾಜ್ಯಗಳ ಉಸ್ತುವಾರಿಯಾಗಿ ಚುನಾವಣೆಯಲ್ಲಿ ಗೆಲುವಿನ ರೂಪುರೇಷೆ ಮತ್ತು ಸಮಗ್ರ ನೀತಿನಿರೂಪಣೆಯನ್ನು ನಿರ್ವಹಿಸಿದರು. ಅಲ್ಲದೆ, ಹಗಲಿರುಳೆನ್ನದೆ ಪ್ರಚಾರಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಆ ರಾಜ್ಯಗಳಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾದರು.

















